

ಶ್ರೀ ದಾಸಗಣೂ ಮಹಾರಾಜ ಕೃತ

# ಶ್ರೀ ಸಾಯಿನಾಥ ಸ್ತವನ ಮಂಜರಿ

ಶ್ರೀ ಸಾಯಿಬಾಬಾ ಸಂಸ್ಥಾನ,
ಶಿರಡಿ, ಪ್ರಕಾಶನ

(1)

## ಓಂ ಸಾಯಿ
## ಶ್ರೀ ಸಾಯಿನಾಥ ಸ್ತವನ ಮಂಜರಿ

ಶ್ರೀ ಗಣೇಶನಿಗೆ ನಮಸ್ಕಾರಗಳು. ಸಕಲ ಜಗಕ್ಕೆಲ್ಲ ಮಯೂರೇಶ್ವರನು ಆಧಾರನು. ಎಲ್ಲ ಕಾರ್ಯಕ್ಕೂ ಸಾಕ್ಷಿ ಈ ಗೌರಿಯ ಪುತ್ರನು. ಹೇ ಅಚಿಂತ್ಯ ಚಿಂತಾರಹಿತ ಲಂಬೋಧರನೇ. ನಮ್ಮನ್ನು ಕಾಯು ಗಣಪತಿಯೇ ॥1॥ ನೀನು ಎಲ್ಲ ದೇವದೇವತೆಗಳಲ್ಲಿ ಮೊದಲಿಗನು. ಆದ್ದರಿಂದ ನಿನಗೆ ಗಣೇಶ ಎನ್ನುತ್ತಾರೆ. ನೀನು ಎಲ್ಲ ಶಾಸ್ತ್ರಗಳಿಗೂ ಆಧಾರನು. ನೀನು ಮಂಗಲ ರೂಪನಾದ ಭಾಲಚಂದ್ರನು (ಹಣೆಯ ಮೇಲೆ ಅರ್ಧ ಚಂದ್ರವನ್ನು ಇಟ್ಟವನು). ॥2॥ ಹೇ ಶಾರದಾಮಾತೆಯೇ. ನೀನು ನಮ್ಮ ವಾಕ್ಯ ಚಿತ್ತದ ಮೇಲೆ ಪ್ರಭುತ್ವ ಸಾಧಿಸಿದವಳು. ನೀನು ಶಬ್ದಗಳ ಸೃಷ್ಟಿಯ ಒಡತಿ. ನಿನ್ನ ಅಸ್ತಿತ್ವ ಇರುವುದರಿಂದ ಈ ಜಗದ ವ್ಯವಹಾರವು ನಡೆಯುತ್ತಲಿದೆ. ॥3॥ ನೀನು ಗ್ರಂಥಕಾರರ ದೇವತೆ. ನೀನು ಎಲ್ಲ ರೀತಿಯಿಂದ ದೇಶಕ್ಕೆ ಭೂಷಣ. ನಿನ್ನಲ್ಲಿ ಜಗತ್ಕಾರ್ಯಗಳ ಅಗಾಧ ಶಕ್ತಿಯಿದೆ. ಜಗದಂಬೆಯಾದ ನಿನಗೆ ನಮೋ ನಮ:. ॥4॥ ಎಲ್ಲ ಸಂತರಿಗೆ ಪ್ರಿಯನಾದ ಪೂರ್ಣಬ್ರಹ್ಮನೇ. ಪಂಡರಿನಾಥನ ಪ್ರತಿರೂಪನೇ. ಕೃಪಾಮೂರ್ತಿಯಾದ ದಯಾಸಾಗರನೇ. ಓ ಪಾಂಡುರಂಗ ನರಹರಿಯೇ. ॥5॥ ನೀನು ಈ ಮಾಯಾ ಜಗತ್ತಿನ ಮಾನವ ಪುತ್ಥಳಿಗಳನ್ನಾಡಿಸುವ ಸೂತ್ರಧಾರಿ. ಈ ಸೃಷ್ಟಿಯಲ್ಲೆಲ್ಲ ನೀನು ತುಂಬಿಕೊಂಡಿದ್ದಿ. ಸರ್ವಶಾಸ್ತ್ರಗಳು ನಿನ್ನ ಸ್ವರೂಪದ ಚಿಂತನ ಮಾಡುತ್ತವೆ. ಆದ್ದರಿಂದ ವಿಜ್ಞಾನ ಹಾಗೂ ಪವಿತ್ರ ಪುಸ್ತಕಗಳ ಉದ್ಭವ ನಿನ್ನ ಅದ್ಭುತ ಸ್ವರೂಪದಿಂದ ಆಗುತ್ತಲಿದೆ. ॥6॥ ಯಾರು

ಯಾರು ಪುಸ್ತಕಗಳ ಬದನೆಕಾಯಿ (ಜ್ಞಾನಿಗಳು). ಅವರಿಗೆಲ್ಲ ನೀನು ದಕ್ಕುವುದಿಲ್ಲ ಅವರಂತಾ ಮೂರ್ಖರು ಕೇವಲ ಬಾಯಿಮಾತಿನ ವಾದವನ್ನೇ ಮಾಡಬೇಕು. ॥7॥ ಕೇವಲ ಸಂತರಷ್ಟೇ ನಿನ್ನನ್ನು ಅರಿತಿದ್ದಾರೆ. ಇತರರಾರೂ ನಿನ್ನನ್ನು ಅರಿತಿಲ್ಲ. ನಿನಗೆ ನನ್ನ ಗೌರವಯುತ ಸಾಷ್ಟಾಂಗ ಪ್ರಣಾಮಗಳು. ನಿನಗೆ ಆದರದ ಸಾಷ್ಟಾಂಗ ಪ್ರಣಾಮಗಳು. ಓ ನೀನು ಐದು ಮುಖವನ್ನು ಹೊತ್ತ ಶಂಕರನು. ನರರರುಂಢ ಮಾಲೆಯನ್ನು ಧರಿಸಿದವನು. ನೀನು ನೀಲಕಂಠ ದಿಗಂಬರನು. ನೀನು ಓಂಕಾರರೂಪಿಯಾದ ಪಶುಪತಿಯು ॥ 9॥ ಯಾರು ಯಾರು ನಿನ್ನ ನಾಮದ ಜಪ ಎಲ್ಲ ಸಮಯದಲ್ಲೂ ಮಾಡುತ್ತಾರೊ ಅವರ ಜೀವನದ ದೈನ್ಯತೆಗಳೆಲ್ಲವೂ ದೂರವಾಗುವವು. ಓ ಜಟಾಧಾರಿಯಾದ ದುರ್ಜಟನೇ. ನಿನ್ನ ನಾಮದಲ್ಲಿ ಅಂತಹ ಶಕ್ತಿಯಿದೆ. ॥10॥ ನಿನ್ನ ಚರಣಗಳಿಗೆ ವಂದಿಸುತ್ತ, ನಾನು ಈ ಸ್ತೋತ್ರವನ್ನು ಬರೆಯಲು ಪ್ರಾರಂಭಿಸುತ್ತಿದ್ದೇನೆ. ಓ ನೀಲಕಂಠನೇ ಇದನ್ನು ಪೂರ್ಣಗೊಳಿಸಲು ಸಹಾಯಮಾಡು. ॥11॥ ಈಗ ಅತ್ರಿಸೂತನಿಗೆ ನಮಸ್ಕರಿಸುತ್ತೇನೆ. ಲಕ್ಷ್ಮಿಯ ಪತಿಯಾದ ವಿಷ್ಣುವಿಗೆ ಶಿರಬಾಗಿ ನಮಸ್ಕಾರಗಳು. ತುಕಾರಾಮ ಮತ್ತು ಇತರ ಸಂತ ಶ್ರೇಷ್ಠರುಗಳಿಗೆ, ಅಂತೇಯೇ ಎಲ್ಲ ಭಕ್ತರಿಗೂ ಕೂಡಾ ನನ್ನ ಪ್ರಣಾಮಗಳು ॥12॥ ಸಾಯಿನಾಥನಿಗೆ ಜೈ ಜೈಕಾರಗಳು. ಪತಿತರನ್ನು ಪಾವನಗೊಳಿಸುವ ಕರುಣಾನಿಧಿಯೇ. ನಾನು ನನ್ನ ಶಿರವನ್ನು ನಿನ್ನ ಅಡಿದಾವರೆಗಳಲ್ಲಿ ಇಡುತ್ತೇನೆ. ಈಗ ನೀನು ನನಗೆ ಅಭಯದಾನವನ್ನು ನೀಡು. ॥13॥ ನೀನು ಸುಖಶಾಂತಿಯ ನೆಲೆಯಾಗಿರುವ ಪೂರ್ಣಬ್ರಹ್ಮ. ನೀನು ಶ್ರೇಷ್ಠರಲ್ಲಿ ಶ್ರೇಷ್ಠನಾದ ವಿಷ್ಣುವು. ಯಾರ ಪತ್ನಿ ಉಮೆಯೋ ಅಂತಹವನು ನೀನು. ಮದನನನ್ನು ದಮನ ಮಾಡುವವನು ನೀನೇ. ॥14॥





ನೀನು ಮನುಷ್ಯರೂಪದ ದೇವತೆಯು. ನೀನು ಜ್ಞಾನಾಕಾಶದ ಸೂರ್ಯನು. ನೀನು ದಯಾಸಾಗರನು. ನೀನು ಭವರೋಗಗಳಿಗೆಲ್ಲ ಔಷಧಸ್ವರೂಪನು. ॥15॥ ನೀನು ದೀನ ದರಿದ್ರರ ಚಿಂತಾಮಣಿಯು. ನೀನು ಭಕ್ತರನ್ನು ಉದ್ಧಾರಗೊಳಿಸುವ ಉದಾರಿಯು ನೀನು ಮುಳುಗುವವನಿಗೆ ಆಧಾರಿಯು. ನೀನು ಅಂಜುಕುಳಿಗಳಿಗೆ ಆಶ್ರಯದಾತನು. ॥16॥ ಜಗದ ಸೃಷ್ಟಿಯ ಮೂಲಕಾರಣನು ನೀನು. ನೀನು ಜಗದ ಚೈತನ್ಯನು. ಮಾಯಾರಹಿತ ಬ್ರಹ್ಮನೂ ಹೌದು ನಿನ್ನ ಹೃದಯವು ಅತೀ ದಯೆಯಿಂದ ತುಂಬಿದೆ. ಈ ವಿಶ್ವವು ನಿನ್ನ ಆಟದಿಂದಲೇ ನಿರ್ಮಾಣವಾಯಿತು. ॥17॥ ನೀನು ಜನ್ಮರಹಿತನು. ಮೃತ್ಯು ಕೂಡಾ ನಿನ್ನ ಮೇಲೆ ಯಾವುದೇ ಪರಿಣಾಮ ಬಿರಲಾರನು. ಗಹನ ಚಿಂತನ ಮಾಡಿದ ಮಾನವನು ಅಂತಿಮವಾಗಿ ಈ ತೀರ್ಮಾನಕ್ಕೆ ಬರುವನು. ॥18॥ ಜನ್ಮ ಮರಣ ಭ್ರಮೆಗಳೆಲ್ಲವೂ ಅಜ್ಞಾನದಿಂದ ಉಂಟಾಗಿವೆ ಆದರೆ ನೀನು ಜಗದ ಈ ಎಲ್ಲ ಕ್ರಮಗಳಿಂದ ಮುಕ್ತನಾಗಿದ್ದಿ, ಆದ್ದರಿಂದ ನೀನು ಅಲಿಪ್ತನು. ॥19॥ ನೀರಿನ ಗೆರೆ ಚಿಮ್ಮಿದಾಗ ಅದಕ್ಕೆ ಸೆಲೆ ಬುಗ್ಗೆ ಕಾರಂಜಿ ಎಂಬುದು ಯುಕ್ತ ನಾಮ. ಹಾರದ ನೀರು ಕೇವಲ ಶಿಲಾ ರೇಖೆ. ಅಲ್ಲಿ ನೀರಿನ ಉಗಮ ಮೊದಲೇ ಇತ್ತು, ಒಳಗಿನಿಂದ ಹೊರಗೆ ಪುಟಿಯಿತು. ॥20॥ ನೀರ ಸೆಲೆ ಹತ್ತಿ ಚಿಮ್ಮಿದ ನೀರು ಬಾವಿ ಕೆರೆ ಸರೋವರ. ನೀರೆ ಇಲ್ಲದಿದ್ದರೆ ಆಗ ಅದು ಕೇವಲ ಒಣ ಕೆರೆ. ಈ ಮಾನವ ಶರೀರದಲ್ಲಿ ಆತ್ಮದ ಪ್ರವೇಶವಾಗುವುದೇ ಜಲದ ಉಗಮದ ರೀತಿ. ॥21॥ ನೀರು ಹತ್ತೋದು ನೀರು ಬತ್ತೋದು ಸೆಲೆಯ ಲಕ್ಷಣವಲ್ಲ. ಸೆಲೆ ಇಲ್ಲದ ಶಿಲೆಗೆ ಇಲ್ಲಾ ಬೆಲೆ. ಅದು ಕೇವಲ ಒಣ ಕಲ್ಲು. ॥22॥ ಬಾವಿ ಕೆರೆಗಳು ತುಂಬಿದಾಗ ಸೆಲೆಗೆ ಗೆಲುವು. ಸಕಲ ಜೀವ ಜಗತ್ತಿಗೆ ಜೀವನ ಕೊಡುವ ಸ್ಫೂರ್ತಿ ಬತ್ತಿದ ಕೆರೆಬಾವಿಗಳು. ಸಕಲ

ಜೀವಜಾತದ ದೈನ್ಯಕ್ಕೆ ಕಾರಣ. ॥23॥ ಈ ನರ ದೇಹವೂ ಒಣಕೆರೆ ಬಾವಿಯಂತೆ, ಕೇವಲ ಶಿಲಾರೇಖೆ. ಪವಿತ್ರ ಅರಿವು ತಿಳಿನೀರಿನ ಬು ಗ್ಗೆಯಂತೆ ಅಂತಹ ಎಷ್ಟೋ ಎಣಿಸಲಾರದಷ್ಟು ನೀರಿನ ಶಿಲಾರೇಖೆ, ನೀರಿನ ಬುಗ್ಗೆ ಕರುಣಿಸು. ॥24॥ ಆದ್ದರಿಂದಲೇ ಆದಿಯಿಲ್ಲದ ಕರುಣಾಮಯಿಯೇ ಈ ಅಜ್ಞಾನವೆಂಬ ಪರ್ವತವನ್ನು ನಾಶಗೊಳಿಸಲು ನೀನು ಒಂದು ವಜ್ರಾಯುಧವಾಗು. ॥25॥ ಇಲ್ಲಿಯವರೆಗೆ ಅಂತಹ ಎಷ್ಟೋಜನರ ಹುಟ್ಟು ಈ ಭೂಮಿಯಲ್ಲಿ ಆಗಿದೆ. ಈಗಲೂ ಕೂಡಾ ಆಗುತ್ತಲಿದೆ. ಭವಿಷ್ಯತ್ತಿನಲ್ಲಿ ಇನ್ನೂ ಹೆಚ್ಚೆಚ್ಚು ಹುಟ್ಟಿ ಬರುವರು. ಇದೆಲ್ಲವೂ ಕೇವಲ ಕಾಲದ ಪ್ರೇರಣೆಯಿಂದಾಗಿಯೇ. ॥26॥ ಅಂತಹ ಪ್ರತಿಯೊಬ್ಬರಿಗೂ ಒಂದೊಂದು ರೂಪ ಮತ್ತು ಹೆಸರು ಕೊಟ್ಟಿದೆ. ಈ ರೂಪ ಹಾಗೂ ಹೆಸರುಗಳಿಂದಲೇ ಈ ಜಗತ್ತಿನಲ್ಲಿ ಪ್ರತಿಯೊಬ್ಬರೂ ಗುರುತಿಸಲ್ಪಡುತ್ತಾರೆ. ॥27॥ ಆದ್ದರಿಂದಲೇ ಈ ಪವಿತ್ರ ಜಾಗೃತಾವಸ್ಥೆಯನ್ನು ವಿಶ್ಲೇಷಿಸಲು ನಾನು ಮತ್ತು ನೀನು ಸರಿಯಲ್ಲ ಏಕೆಂದರೆ ಎಲ್ಲಿ ದ್ವೈತ ಸಾಧ್ಯವಿಲ್ಲವೋ ಅದು ಅವಶ್ಯಕವಾಗಿ ಶುದ್ಧ ಜಾಗ್ರತಾವಸ್ಥೆಯು. ॥28॥ ಎಲ್ಲಿಯವರೆಗೆ ಶುದ್ಧ ಜಾಗ್ರತಾವಸ್ಥೆಯು. ನಿಜವಾಗಿಯೂ ಈ ಜಗತ್ತನ್ನು ಆವರಿಸಿಕೊಳ್ಳುತ್ತದೋ ಆಗ ನಾನು ನೀನು ಎಂಬ ಇಬ್ಬಗೆಯ ಭಾವ ಉದಯಿಸಲು ಹೇಗೆ ಸಾಧ್ಯ? ॥29॥ ಮೇಘಗರ್ಭದೊಳಗಿನ ನೀರು ಎಲ್ಲೆಲ್ಲೂ ಒಂದೇ ರೀತಿಯದು. ಆದರೆ ಅದು ಧರೆಗಿಳಿದಂತೆ ಬೇರೆ ಬೇರೆ ಕೆಲಸಗಳನ್ನು ವಹಿಸಿಕೊಳ್ಳುತ್ತದೆ. ಅಥವಾ ಬೇರೆ ಬೇರೆ ಆಕೃತಿಯನ್ನು ಹೊಂದುತ್ತದೆ. ॥30॥ ಯಾವ ನೀರು ಗೋದಾವರಿ ಮಾತೆಯ ಮಡಿಲಲ್ಲಿ ಹರಿಯುತ್ತದೋ ಅದನ್ನು ಗೋದಾವರಿ ಎನ್ನುತ್ತಾರೆ. ಯಾವುದು ಬಾವಿಯಲ್ಲಿ ಬಿಳುತ್ತದೊ ಅದಕ್ಕೆ ಅಂತಹ ಅರ್ಹತೆ ಇರುವುದಿಲ್ಲ. ॥31॥





ಗೋದಾಮಾತೆಯು ಪವಿತ್ರಳು ನೀನು ಆ ಗೋದಾವರಿಯ ಪವಿತ್ರ ತಿಳಿನೀರಿನಂತೆ. ನಾವು ಕೆರೆ ಬಾವಿ ಕೊಳಗಳಂತೆ. ಇದೇ ನನ್ನ ಹಾಗೂ ನಿನ್ನಲ್ಲಿರುವ ಭೇದ. ॥32॥ ನಮ್ಮ ಜೀವನದ ಕೃತಾರ್ಥಕ್ಕಾಗಿ ಹಾಗೂ ಪರಿಪೂರ್ಣತೆಗಾಗಿ ಕರಗಳೆರಡನ್ನೂ ಜೋಡಿಸಿ ಶಿರಬಾಗಿ ನಿಮ್ಮೆಡೆಗೆ ಬರಬೇಕಾಗಿದೆ. ಏಕೆಂದರೆ ನೀವು ಅಂತಹ ಪವಿತ್ರತೆಯ ನೆಲೆಯಾಗಿರುವಿರಿ. ॥33॥ಜಲದ ಪಾತ್ರದ ಮೂಲಕ ಪಾವಿತ್ರ್ಯ ನಿರ್ಮಾಣಗೊಳ್ಳುತ್ತದೆ. ಪೂರ್ಣ ಗೋದಾವರಿಯು ಪವಿತ್ರಳು. ಬರೀ ನೀರೆಂದು ಭಾವಿಸಿದರೆ ಅದು ಎಲ್ಲೆಡೆಯಲ್ಲ. ಕೇವಲ ಒಂದೇ ರಿತಿಯದು. ॥34॥ ಹೇಗೆ ಗೋದಾವರಿ ತಟವನ್ನು ಪವಿತ್ರವೆಂದು ಪರಿಗಣಿಸಿದೆ ನೋಡು. ಅದರಂತೆ ಅದು ಭೂಭಾಗದ ಗುಣದಿಂದಾಗಿ ಪವಿತ್ರವೆನ್ನಲು ಕಾರಣೀಭೂತವಾಗಿದೆ. ॥35॥ ಮೇಘಗರ್ಭದೊಳಗಿನ ನೀರು ಬದಲಾಗಲು ಭೂವಿಯ ಯಾವುದೇ ಭಾಗವು ಕಾರಣವಲ್ಲ. ಅಂತಹ ಭೂವಿಯ ಭಾಗವು ಗೋದಾವರಿಯೆಂದು ಶಾಸ್ತ್ರವನ್ನು ತಿಳಿದವರಿಂದ ಕರೆಯಲ್ಪಡುತ್ತದೆ. ॥36॥ ಇತರ ಕಡೆಗೆ ಬಿದ್ದ ನೀರು ಅದು ಅಲ್ಲಿಯ ಮಣ್ಣಿನ ಗುಣ ದೋಷಗಳನ್ನು ಹೊಂದುತ್ತದೆ. ಕಲುಷಿತ ಕಹಿ ಉಪ್ಪು ನೀರು ಆಗುತ್ತದೆ. ಅದು ಜನ್ಮತಃ ಸಿಹಿಯಾಗಿದ್ದರೂ ಕೂಡ ಈ ಭೂಮಿಯ ಮೇಲೆ ಬಿದ್ದ ನಂತರ ಆ ಭೂ ಭಾಗದ ಗುಣಗಳನ್ನು ಹೊಂದುತ್ತದೆ. ॥37॥ ಅದರಂತೆ ಇದು ನಿನಗೂ ಅನ್ವಯಿಸುತ್ತದೆ ಗುರುವರ್ಯಾ. ಏಕೆಂದರೆ ನಿನ್ನಲ್ಲಿ ಅಪವಿತ್ರ ಆರು ಶತ್ರುಗಳಿಲ್ಲ. ಪಾವಿತ್ರತೆಯ ಕಾರಣಕ್ಕಾಗಿ ನಿನಗೂ ಸಾಧುವೆಂಬ ನಾಮಾಂಕಿತವು ಶೋಭಿಸುತ್ತದೆ. ॥38॥ ಆದ್ದರಿಂದ ನೀನು ಪವಿತ್ರ ಗೋದಾವರಿಯು. ನಾನು ನಿನ್ನನ್ನು ಹಾಗೆ ಕರೆಯುತ್ತೇನೆ. ಏಕೆಂದರೆ ನೀನು ಅದರಂತೆ ಅಲಂಕರಿಸಿದ್ದಿ. ಎಲ್ಲರ ಮಧ್ಯದಲ್ಲಿ ನೀನೊಂದು ಉನ್ನತ ಶಿಖರದಲ್ಲೇ ಇರುವಿ. ॥39॥ ಈ

ಸೃಷ್ಟಿಯ ಪ್ರಾರಂಭದಿಂದಲೂ ಗೋದಾವರಿಯ ಉಗಮವಿದೆ. ಇಂದಿನವರೆಗೂ ಅದರಲ್ಲಿ ನೀರು ತುಂಬಿದೆ. ಅದರಲ್ಲಿ ಹನಿಯೂ ಕಡಿಮೆಯಾಗಿಲ್ಲ. ॥40॥ ಯೋಚಿಸಿ, ರಾವಣನ ಶತ್ರುವು ರಾಮನು ಗೋದಾವರಿ ತಟದಲ್ಲಿ ಬಂದಾಗ ಅಂದಿನ ನೀರು ಇಂದಿನವರೆಗೂ ಹೇಗೆ ಇರಲು ಸಾಧ್ಯ? ಇಲ್ಲ. ॥41॥ ಆದರೆ ಗೋದಾತಟವು ಮೊದಲಿನಂತೆ ಇದೆ. ಆದರೆ ನೀರು ಸಾಗರಕ್ಕೆ ಹರಿದಿದೆ. ಆದರೂ ನದಿಯ ತಟದ ಪವಿತ್ರತೆ ಇಂದಿಗೂ ಸ್ಥಿರವಾಗಿ ಹಾಗೆಯೇ ಇದ್ದೇ ಇದೆ. ॥42॥ ಪ್ರತಿ ವರುಷವೂ ಹಳೆಯ ನೀರು ಹರಿದು ಹೊಸ ನೀರು ನದಿಯಲ್ಲಿ ಹರಿದು ಬರುತ್ತದೆ. ಇದು ಜಗತ್ತಿನ ಎಲ್ಲರಿಗೂ ತಿಳಿದ ಸತ್ಯ. ಅಂಥದೇ ನ್ಯಾಯ ನಿಮ್ಮಲ್ಲಿಯೂ ಕೂಡಾ. ॥43॥ ಶತಮಾನಗಳು ಒಂದು ವರುಷದಂತೆ ಆ ಶತಮಾನದಲ್ಲಿ ಯಾವ ಸಂತರು ಅವತಾರವೆತ್ತುತ್ತಾರೊ ಗೋದೆಯ ನೀರಿನಂತೆ. ಅದರಂತೆ ಇತರ ಸಾಧು ಸಂತರುಗಳ ಆತ್ಮವು ನೀರಿನ ಅಲೆಗಳಂತೆ. ॥44॥ ಪೂರ್ವ ಶತಮಾನದಲ್ಲಿ ಈ ಪವಿತ್ರ ಗೋದಾವರಿಯಲ್ಲಿ ಖಂಡಿತವಾಗಿಯೂ ಬ್ರಹ್ಮದೇವನ ಪುತ ಸಂತ ಸನಕ ಸನಂದರಂತಹ ಸಂತರ ಪ್ರವಾಹವೇ ಹರಿದಿರಬೇಕು. ॥45॥ ಅನಂತರ ನಾರದ, ತುಂಬರ, ಧ್ರುವ, ಪ್ರಲ್ಹಾದ, ಬಲಿಯಂತಹ ಶ್ರೇಷ್ಠ ರಾಜರು ಶಬರಿ, ಅಂಗದ, ವಾಯುಕುಮಾರ, ವಿದುರ ಕೃಷ್ಣಗೋಪಗೋಪಿ ಇವರುಗಳ ಪ್ರವಾಹವೇ ಹರಿದು ಬಂದಿರಬೇಕು. ॥46॥ ಹೇಗೆ ಅಂದಿನಿಂದ ಪ್ರತಿ ಶತಮಾನದಲ್ಲೂ ಇಂದಿನವರೆಗೂ ಅಂತಹ ಅಲೆಗಳು ಪುನ: ಪುನ: ನಾನು ಎಣಿಸಲಿಕ್ಕೆ ಬಾರದಷ್ಟು ಹರಿದು ಬರುತ್ತಲಿವೆ. ॥47॥ ಇಂದಿನ ಈ ವರ್ತಮಾನ ಕಾಲದ ಶತಮಾನದಲ್ಲಿ ಈ ಗೋದಾವರಿಯಲ್ಲಿ ನೀವು ಪ್ರವಾಹದಂತೆ ಬಂದಿರುವಿರಿ. ಆದಕ್ಕೆ ಯಾವುದೇ ರೀತಿಯ ಸಂಶಯವಿಲ್ಲ ಓ





ಸಾಯಿನಾಥ ಗುರುವರ್ಯನೇ. ॥48॥ ಆದ್ದರಿಂದಲೇ ನಾನು ನಿಮ್ಮ ಪವಿತ್ರ ಪಾದಕಮಲಗಳಿಗೆ ನಮಸ್ಕರಿಸುತ್ತೇನೆ. ನನ್ನ ಯಾವುದೇ ದುರ್ಗುಣಗಳನ್ನು ಗಣನೆ ಮಾಡಬೇಡವೆಂದು ನಾನು ವಿನಂತಿಸುತ್ತೇನೆ.॥49॥ ನಾನು ಭವಸಾಗರದಲ್ಲಿ ಮುಳುಗುತ್ತಿರುವ ಒಂದು ಹಡಗು. ಪಾತಕಿಗಳ ಪಾತಕನೂ ಕೂಡಾ. ದುರ್ಗುಣಗಳ ಖಣಿಯೂ ಕೂಡಾ. ಆದರೂ ನನ್ನನ್ನು ದೂರ ನೂಕಬೇಡಾ ॥50॥ ಲೋಹವನ್ನು ಚಿನ್ನವಾಗಿಸುವ ಶಕ್ತಿಯು ಪರೀಸ (ಪಾರಸ)ಗೆ ಇದೆ. ಇಲ್ಲಿ ಪರೀಸವು ಕಬ್ಬಿಣದ ಯಾವುದೇ ರೀತಿಯ ಗುಣದೋಷಗಲನ್ನು ನಿರ್ಲಕ್ಷಿಸುತ್ತದೆ. ಗೋದಾಮಾತೆಯು ಹರಿಯುವಾಗ ತನ್ನ ಗರ್ಭದಲ್ಲಿ ಹರಿಯುವ ಹರಿಯುವ ಪುಟ್ಟ ಪುಟ್ಟ ನದಿಗಳನ್ನು ಹಳ್ಳಗಳನ್ನು ತನ್ನ ಗರ್ಭದಲ್ಲಿಟ್ಟುಕೊಂಡೇ ಹರಿಯುತ್ತದೆ. ಎಂದಿಗೂ ತಿರಸ್ಕರಿಸುವುದಿಲ್ಲ. ॥51॥ ನಿನ್ನ ಕೃಪಾದೃಷ್ಟಿಯಿಂದ ನನ್ನ ಎಲ್ಲ ದುರ್ಗುಣಗಳನ್ನು ವೇಗವಾಗಿ ನಾಶಮಾಡು. ಈ ವಿನಂತಿಯೊಂದನ್ನೇ ನಮ್ರತೆಯಿಂದ ಈ ನಿನ್ನ ಗುಲಾಮ ದಾಸಗಣು ಮಾಡುತ್ತಿದ್ದಾನೆ. ॥52॥ ಪರೀಸದ ಸಂಗ ಮಾಡಿದ ಲೋಹವು ತನ್ನ ಜನ್ಮದಾತ ಗುಣದೋಷಗಳನ್ನು ಬದಲಾಯಿಸದೇ ಹೋದರೆ, ಓ ಗುರುದೇವನೆ ಆದು ಪರೀಸಗಳ ಘನತೆಗೊಂದು ಕಳಂಕ. ॥53॥ ಇನ್ನು ನನ್ನನ್ನು ಪಾಪಿಯನ್ನಾಗಿ ಇಡಬೇಡಾ. ನೀನು ಹೀನತ್ವ ಅಥವಾ ಸಣ್ಣತನವನ್ನು ತೆಗೆದುಕೊಳ್ಳಬೇಡಾ. ತಾವು ಒಂದು ಪರೀಸ ನಾನು ಕಬ್ಬಿಣ. ಇನ್ನು ನನ್ನನ್ನು ಪರಿವರ್ತಿಸು. ಪರಿವರ್ತಿಸು. ನಾನು ನಿನ್ನವನು. ॥54॥ ಮಕ್ಕಳು ಯಾವತ್ತೂ ತಪ್ಪು ಮಾಡುತ್ತವೆ. ಆದರೆ ಮಾತೆಯು ಎಂದೂ ಸಿಟ್ಟು ಮಾಡುವುದಿಲ್ಲ ಇದನ್ನು ಧ್ಯಾನದಲ್ಲಿಟ್ಟು ನನ್ನನ್ನು ಅನುಗ್ರಹಿಸು. ॥ 55 ॥ ಓ ಸದ್ಗುರು ಸಾಯಿನಾಥನೇ, ನೀನು ನನ್ನ ಕಲ್ಪತರು. ನೀನು ಈ

ಸಂಸಾರರೂಪಿ ಮಹಾಸಾಗರವನ್ನು ಪಾರುಮಾಡಿಸುವ ಭವ್ಯ ಹಡಗು. ಮಹಾಸಾಗರವನ್ನು ಪಾರು ಮಾಡಿಸುವ ಕಾರ್ಯ ನಿಮ್ಮಿಂದಲೇ ಸಾಧ್ಯ. ಅದು ನಿಮ್ಮಿಂದಲೇ ಸಾಧ್ಯ ಗುರುವರ್ಯಾ. ।।56।। ನೀನು ಕಾಮದೇನುವು. ನಾನು ಬಯಸಿದ್ದೆಲ್ಲ ಕೊಡುವ ಚಿಂತಾಮಣಿ ನೀನು. ನೀನು ಜ್ಞಾನಾಕಾಶದ ಸೂರ್ಯನು. ನೀನು ಸದ್ಗುಣಗಳ ಖಣಿಯು. ನೀನು ಸ್ವರ್ಗಕ್ಕೆ ಮೆಟ್ಟಿಲು ಕೂಡಾ. ।।57।। ಹೇ ಪುಣ್ಯವಂತ ಪರಮ ಪಾವನನೇ. ಶಾಂತಿ ಸಂತೋಷಗಳ ನೆಲೆಯೇ, ಸತ: ಪರಿಪೂರ್ಣ ಬ್ರಹ್ಮ ಸ್ವರೂಪನೇ. ಭೇದಭಾವಗಳಿಲ್ಲದ ಗುರುವೇ. ನೀನು ಜ್ಞಾನದ ಮಹಾಸಾಗರನು. ।।58।। ಹೇ ಜ್ಞಾನಿಗಳ ಮೂರ್ತಿಯೇ. ಎಲ್ಲ ನರರಲ್ಲಿ ಶ್ರೇಷ್ಠನಾದ ನರೋತ್ತಮನೇ ಕ್ಷಮೆ ಶಾಂತಿಗಳ ನಿವಾಸಧಾಮನೇ. ಹೇ ಭಕ್ತರ ಹೃದಯದಲ್ಲಿ ನೆಲಸಿ ಭಕ್ತ ಜನರಿಗೆ ವಿಶ್ರಾಂತಿ ನೀಡುವವನೇ. ನನಗೆ ಪ್ರಸನ್ನನಾಗು. ॥ 59 ॥ ನೀನು ಸದ್ಗುರು ಮಛ್ಛಿಂದರನು. ನೀನು ಮಹಾತ್ಮನಾದ ಜಾಲಿಂಧರನು. ನೀನು ನಿವೃತ್ತಿನಾಥ. ಜ್ಞಾನೇಶ್ವರ, ಕಬೀರ, ಶೇಖ, ಏಕನಾಥ ಮಹಾರಾಜ ಎಲ್ಲರೂ ನೀನೇ. ॥ 60 ॥ ನೀನು ಭೋದಲನು ನೀನು ಸಾವತಾಮಾಳಿ. ನೀನು ನಿಜವಾಗಿಯೂ ರಾಮದಾಸನು. ನೀನು ತುಕಾರಾಮನು. ಸಾಯಿನಾಥನೇ ನೀನು ಸಖಾರಾಮ ಮಹಾರಾಜನು. ನೀನು ಮಾಣಿಕ ಪ್ರಭುವು. ।।61।। ನಿನ್ನ ಈ ಅವತಾರವು ಹಾಗೂ ವಿವಿಧ ಸ್ವಭಾವವೂ ನಿಜವಾಗಿಯೂ ತಿಳಿಯಲು ಕಷ್ಟವು. ನಿನ್ನ ಜಾತಿ-ಕುಲಗಳ ಗುರುತನ್ನು ನೀನು ಇನ್ನೂ ಯಾರಿಗೂ ತಿಳಿಸಿಲ್ಲ. ।62। ಕೆಲವರು ಹೇಳುತ್ತಾರೆ ನೀನು ಮಹಮ್ಮದಿಯನೆಂದು. ಮತ್ತೆ ಕೆಲವರು ಹೇಳುತ್ತಾರೆ ನೀನು ಬ್ರಾಹ್ಮಣನೆಂದು. ಕೃಷ್ಣನಂತೆ ಪವಿತ್ರ ಲೀಲೆಯನ್ನು ನೀನು ಈ ಭ್ರಮಾ ಪ್ರಪಂಚದಲ್ಲಿ ತೋರಿಸಿರುವಿ. ॥ 63 ॥ ಕೃಷ್ಣನನ್ನು





ನೋಡಿ ಬೇರೆ ಬೇರೆ ಜನರು ಅವನನ್ನು ವಿವಿಧ ಹೆಸರಿನಿಂದ ಕರೆದರು. ಕೆಲವರು ಅವನನ್ನು ಯದುಕುಲದ ಭೂಷಣನೆಂದು, ಕೆಲವರು ದನ ಕಾಯುವ ಗೊಲ್ಲನೆಂದು. ।।64।। ಯಶೋದೆಯು ಅವನನ್ನು ಕೋಮಲ ಮಗುವೆಂದು. ಕಂಸನು ಮಹಾಕಾಲನೆಂದು ತನ್ನನ್ನು ಕೊಲ್ಲಲು ಬಂದ ಯಮನೆಂದು, ಉದ್ಧವನು ಪ್ರಿಯ ಮಿತ್ರನೆಂದು, ಅರ್ಜುನನು ಜಗದ್ಗುರು ಸರ್ವಜ್ಞನೆಂದು ಹೇಳುತ್ತಾರೆ. ।।65।। ಓ ಗುರುವರನೇ ಪ್ರತಿಯೊಬ್ಬರ ಭಾವಕ್ಕೆ, ಮನಕ್ಕೆ ತಕ್ಕಂತೆ, ಅವರವರ ನಿಶ್ಚಯದಂತೆ ಅವರು ನಿನ್ನನ್ನು ಕರೆದಿದ್ದಾರೆ. ।।66।। ಮಸೀದಿಯ ವಾಸಸ್ಥಾನ, ಚುಚ್ಚಿಕೊಳ್ಳದ ಕಿವಿ ಮತ್ತು ಕುರಾನದ ಪ್ರಾರ್ಥನಾ ರೀತಿ ನೋಡಿ ನಿನ್ನನ್ನು ಯಮನ ಎಂದು ಕರೆಯಬೇಕಾಗಿದೆ. ।।67।। ಅಗ್ನಿಯ ಪೂಜೆಯನ್ನು ನೋಡಿ ದಯಾರೂಪಿಯಾದ ನಿನ್ನನ್ನು ನೋಡಿ ನಮ್ಮ ಮನಕ್ಕೆ ನಿಶ್ಚಿತವಾಗಿಯೇ ಇದೆ. ನೀನು ಹಿಂದುವೇ ಎಂದು. ।।68।। ಆದರೆ ಇವೆಲ್ಲವೂ ವ್ಯವಹಾರಿಕ ಭೇದವಾಗಿವೆ. ಕೇವಲ ತರ್ಕಜ್ಞಾನಿ ತತ್ವಜ್ಞಾನಿಗಳು ಕಾಣುವಂತಹವು ಆದರೆ ಜ್ಞಾನದಾಯಿ ಭಕುತರಿಗೆ ಇವೆಲ್ಲವೂ ಯಾವುದೇ ಪರಿಣಾಮವನ್ನುಂಟು ಮಾಡಿಲ್ಲ. ।।69।। ನಿಮ್ಮದು ಜೀವನಮುಕ್ತಿಯ ಹೊರಗಿನ ಸ್ಥಿತಿಯು. ಜಾತಿಕುಲಗಳ ಬೇಧವು ನಿಮಗಿಲ್ಲ. ನೀನು ಎಲ್ಲ ಶ್ರೇಷ್ಠ ಗುರುಗಳ ಪ್ರತಿರೂಪನು. ನೀನು ಈ ಜಗದ ಸೃಷ್ಟಿಕರ್ತನು. ।।70।। ಹಿಂದೂ ಮುಸ್ಲೀಮರಲ್ಲಿ ವೈಮನಸ್ಸು ಉಂಟಾಯಿತು. ಆದ್ದರಿಂದ ಅವರನ್ನು ಒಂದುಗೂಡಿಸಲು ಮಸೀದಿ ಮತ್ತು ಅಗ್ನಿಯ ಉಪಾಸನೆ ನೀನು ಸ್ವೀಕರಿಸಿ ನಿನ್ನ ಲೀಲೆಯನ್ನು ಭಕುತರಿಗೆ ತೋರಿಸಿರುವಿ. ।।71।। ನೀನು ಜಾತಿ ಕುಲಗಳ ಅತೀತನು. ಸತ್ಯ ಪರಬ್ರಹ್ಮನು. ಸತ್ ಸ್ವರೂಪವೇ ನೀನಾಗಿರುವಿ. ತರ್ಕದಿಂದ ಯೋಚಿಸಿದರೂ ನೀನು ಸಾಕ್ಷಾತ್ ಪರಬ್ರಹ್ಮನು. ।।72।। ಎಂತಹದೇ ತರ್ಕ

ವಿತರ್ಕದ ಊಹಾ ಕುದುರೆಯನ್ನು ನಿನ್ನ ಮುಂದೆ ನಡೆಯಿಸಿದರೂ ಅದಕ್ಕೆ ಲಗಾಮು ಹಾಕಿದರೂ ನನ್ನ ಕ್ಷುಲ್ಲಕ ಶಬ್ದಗಳಿಗೆ ನೀನು ವಶನಲ್ಲ. ||73|| ಆದರೂ ನಿನ್ನನ್ನು ನೋಡಿ ನನಗೆ ಮೌನವಾಗಿರಲು ಸಾಧ್ಯವಿಲ್ಲ. ಏಕೆಂದರೆ ನಿನ್ನನ್ನು ಸ್ತುತಿಸಲು ಶಬ್ದಗಳೇ ವ್ಯಾವಹಾರಿಕವಾಗಿ ಒಂದೇ ಒಂದು ಸಾಧನವು. ||74|| ಆದ್ದರಿಂದಲೇ ಶಬ್ದಗಳಿಂದಲೇ ಯಾವುದೇ ರೀತಿಯ ವರ್ಣನೆ ಸಾಧ್ಯವೋ. ಅದನ್ನು ನಾನು ಯಾವಾಗಲೂ ನಿಮ್ಮ ಕೃಪಾಪ್ರಸಾದದಲ್ಲಿ ಸ್ವಪ್ರೇರಣೆಯಿಂದ ಕಾಣಿಕೆಯಾಗಿ ಕೊಡುತ್ತೇನೆ. ||75|| ಸಂತರ ಯೋಗ್ಯತೆ ಶಿಖರದಂತೆ ಎತ್ತರದ್ದು ದೇವದೇವತೆಗಳಿಗಿಂತಲೂ ಬೇರೆಯ ರೀತಿಯದ್ದು. ಆದ್ದರಿಂದ ನನ್ನದು ನಿನ್ನದು ಎಂಬ ಬೇಧವು ಸಂತ ಶ್ರೇಷ್ಠರ ಹತ್ತಿರ ಮೂಲತ: ಇಲ್ಲವೇ ಇಲ್ಲ. ||76|| ಹಿರಣ್ಯಕಶ್ಯಪ ಮತ್ತು ರಾವಣರಿಗೆ ದೇವರ ದ್ವೇಷದಿಂದ ಮೃತ್ಯು ಬಂದಿತು. ಆದರೆ ಅಂತಹ ಯಾವುದೇ ಘಟನೆಗಳು ಸಂತರ ಕೈಯಿಂದ ಎಂದಿಗೂ ಘಟಿಸಲಿಲ್ಲ. ||77|| ಗೋಪಿಚಂದ ರಾಜನು ಜಾಲಿಂಧರನನ್ನು ಕಸದರಾಶಿಯಲ್ಲಿ ಹುಗಿದರೂ ಆ ಸಂತ ಮಹಾತ್ಮನಿಗೆ ಯಾವುದೇ ತರಹದ ದು:ಖವಾಗಲಿ ವಿಷಾದವಾಗಲೀ ಆಗಲಿಲ್ಲ. ||78|| ಅದಕ್ಕೆ ವಿರುದ್ಧವಾಗಿ ರಾಜನನ್ನು ಭೌತಿಕ ಪ್ರಪಂಚದಿಂದ ಮುಕ್ತಮಾಡಿ ಅವನನ್ನು ಚಿರಂಜೀವಿಯನ್ನಾಗಿ ಮಾಡಿದೆ. ಸಾಧು ಸಂತರ ಇಂತಹ ಪ್ರತಾಪ ವರ್ಣನಾತೀತ. ||79|| ಸಾಧು ಸಂತರು ಸೂರ್ಯನಂತೆ. ಅವರ ಕೃಪೆ ಪೂರ್ಣ ಪ್ರಕಾಶದಂತೆ. ಸಾಧು ಸಂತರು ಪೂರ್ಣಚಂದ್ರನಂತೆ. ಅವರ ಕೃಪೆ ಚಂದ್ರಕಿರಣನಂತೆ ಪ್ರಶಾಂತವಾದುದು. ||80|| ಸಾಧುಗಳು ನಿಜವಾಗಿಯೂ ಸಂತಸ ನೀಡುವ ಕಸ್ತೂರಿಯಂತೆ ಅವರ ಆಶೀರ್ವಾದವು ಕಸ್ತೂರಿಯ ಪರಿಮಳದಂತೆ. ಸಂತರು ರಸತುಂಬಿದ ಕಬ್ಬಿನಂತೆ. ಅವರ ಆಶೀರ್ವಾದವು ರಸದ





ಸಿಹಿಯಂತೆ. ||81|| ಸಂತರಿಗೆ ಒಳ್ಳೆಯದು ಕೆಟ್ಟದ್ದು, ಸಜ್ಜನರು, ದುರ್ಜನರು ಎಲ್ಲರೂ ನಿಶ್ಚಯವಾಗಿಯೂ ಒಂದೆ. ಅವರಿಗೆ ಪಾಪಿ ಹಾಗೂ ದುಷ್ಟರ ಮೇಲೆ ಅಪಾರ ಪ್ರೀತಿ. ||82|| ಗೋದಾವರಿ ಜಲದಲ್ಲಿ ಮಲಿನ ಬಟ್ಟೆಗಳನ್ನಷ್ಟೇ ತೊಳೆಯುತ್ತೇವೆ. ಆದರೆ ಸ್ವಚ್ಛ ಬಟ್ಟೆಗಳು ಪೆಟ್ಟಿಗೆಯಲ್ಲಿದ್ದು ಅವು ಗೋದಾವರಿಯ ಮಡಿಲಿನಿಂದ ದೂರವಿರುತ್ತವೆ. ||83|| ಆ ಪೆಟ್ಟಿಗೆಯಲ್ಲಿದ್ದ ಬಟ್ಟೆಗಳನ್ನು ಒಂದೊಮ್ಮೆಯಾದರೂ ಹೊರಗೆ ಗೋದಾಮಾತೆಯ ಮಡಿಲಲ್ಲಿ ಸ್ವಚ್ಛಮಾಡಬೇಕು. ಅಂತೆಯೇ ಸ್ವಚ್ಛವಾಗಲಿಕ್ಕೆ ನಾವು ನಿನ್ನ ಮಡಿಲಿಗೆ ಬಂದಿದ್ದೇವೆ. ||84|| ಇಲ್ಲಿ ಪೆಟ್ಟಿಗೆ ವಿಷ್ಣುವಿನ ಸ್ಥಾನವಾದ ವೈಕುಂಠ ತಾವು ಸಂತ ಗೋದಾವರಿಯು ವಿಶ್ವಾಸವವು ನದಿಗೆ ಕಟ್ಟಿದ ದಡದಂತೆ. ಷಡವಿಕಾರ ತುಂಬಿದ ಎಲ್ಲ ಮಾನವರು ಮಲಿನ ಬಟ್ಟೆಗಳಂತೆ. ||85|| ನಿಮ್ಮ ಪಾದಗಳ ದರ್ಶನ ಪಡೆದರೆ ಅದುವೇ ಗೋದಾಸ್ನಾನದಂತೆ. ನಮ್ಮ ಎಲ್ಲ ಪಾಪಗಳನ್ನು ತೊಳೆದು ಸಮರ್ಥ ಸದ್ಗುರುವೇ ನಮ್ಮನ್ನು ಪಾವನ ಮಾಡು ||86|| ತಮ್ಮ ದರ್ಶನಕ್ಕೆ ಬರಲು ನಮಗೆ ಅಧಿಕಾರವಿದೆ. ಏಕೆಂದರೆ ನಾವು ಸಂಸಾರಯುಕ್ತ ಜನರು ಮೇಲಿಂದ ಮೇಲೆ ಪಾಪಗಳನ್ನು ಮಾಡುತ್ತಿರುತ್ತೇವೆ. ಆದ್ದರಿಂದಲೇ ನಿನ್ನ ದರ್ಶನಕ್ಕೆ ಬರಲು ನಾವು ಅಧಿಕಾರಯುಕ್ತ ಜನರು. ||87|| ಗೋದಾವರಿಯಲ್ಲಿ ತುಂಬ ನೀರಿದೆ. ಷಡವಿಕಾರದಿಂದ ಮಲಿನವಾದ ನನ್ನ ಈ ಶರೀರವೆಂಬ ಬಟ್ಟೆಯನ್ನು ತೊಳೆಯಲು ನಿನ್ನಲ್ಲಿಗೆ ಬಂದಿದ್ದೇನೆ. ಈ ಮಲಿನ ಬಟ್ಟೆ ಹಾಗೆಯೇ ಉಳಿದರೆ ಅದರ ದೋಷವು ನನ್ನದಲ್ಲ. ಗೋದೆಯದು. ||88|| ನೀವು ತಂಪನ್ನು ನೀಡುವ ದಟ್ಟ ವೃಕ್ಷ. ನಾವು ತ್ರಿತಾಪಗಳಿಂದ ತಳಮಳಿಸುವ ಪಾದಾಚಾರಿಗಳು. (ಆದಿಭೌತಿಕ, ಅಧ್ಯಾತ್ಮಿಕ, ಆದಿದೈವಿಕ) ಈ ಪಾದಾಚಾರಿಗಳು ತ್ರಿತಾಪ ದೂರಮಾಡಲೆಂದೇ ತಾವು ತಂಪನ್ನು ನೀಡುವ

ದಟ್ಟ ಛಾಯೆಯಾಗಿದ್ದಿರಿ. ॥89॥ ಈ ಮೂರೂ ತಾಪಗಳಿಂದ ಶಾಂತ ಮಾಡಲಿಕ್ಕೆ ತಮ್ಮ ಕೃಪಾಕಟಾಕ್ಷದ ಶೀತಲ ಛಾಯೆಯನ್ನು ನೀಡಿ ನಿನ್ನ ಕೃಪೆಯ ತಣ್ಣಗಿನ ನೆರಳಿನಲ್ಲಿ ನಮ್ಮೆಲ್ಲರ ರಕ್ಷಣೆಯನ್ನು ಮಾಡು. ॥ 90॥ ವೃಕ್ಷದ ಅಡಿಯಲ್ಲಿ ಕುಳಿತವನಿಗೆ ಸೂರ್ಯನ ಶಾಖದ ಅನುಭವವಾದರೆ ಆ ವೃಕ್ಷಕ್ಕೆ ನೆರಳನ್ನು ನೀಡುವ ವೃಕ್ಷವೆಂದು ಯಾರು ಕರೆಯುತ್ತಾರೆ.? ॥91॥ ನೋಡು ನಿನ್ನ ಕೃಪೆಯಿಲ್ಲದೇ ಈ ಜಗದಲ್ಲಿ ಯಾವುದೇ ರೀತಿಯ ಒಳ್ಳೆಯ ಘಟನೆಗಳು ನಡೆಯಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಶೇಷಶಾಯಿಯಾದ ಶ್ರೀ ಕೃಷ್ಣ ಭಗವಂತನು ಅರ್ಜುನನಿಗೆ ಧರ್ಮವನ್ನು ಎತ್ತಿ ಹಿಡಿಯಲು ಒಳ್ಳೆಯ ಸಹಕಾರಿಯಾದನು. ॥92॥ ಸುಗ್ರೀವ ಕೃಪೆಯಿಂದಾಗಿ ವಿಭೀಷಣನಿಗೆ ರಾಜಾರಾಮನ ಸಖ್ಯ ದೊರೆಯಿತು. ಸಂತರ ಸಂಪರ್ಕದಿಂದಾಗಿಯೇ ಶ್ರೀಹರಿಗೆ ಉನ್ನತ ಸ್ಥಾನ ದೊರೆಯಿತು. ॥93॥ ವೇದವೂ ವರ್ಣಿಸಲಾರದ ಬ್ರಹ್ಮನು ಹೇಗೆ ನಿರಾಕಾರನೊ ಅದನ್ನು ಮನಗಂಡು ಇಂತಹ ಬ್ರಹ್ಮನನ್ನು ಭೂಮಿಯ ಮೇಲೆ ಸಗುಣಗೊಳಿಸಿ ಸಂತರು ನಿರಾಕಾರನನ್ನೂ ಕೂಡಾ ನಾಚಿಸಿದ್ದಾರೆ. ॥94॥ ರುಕ್ಮಿಣಿಯ ರಮಣನಾದ ವೈಕುಂಠಪತಿ ದಾಮಾಜಿಗಾಗಿ ಮಾದಿಗ ಜನ್ಮ ಪಡೆದನು. ಜೋಖಾಮೇಳನಿಗಾಗಿ ಸತ್ತ ಎಮ್ಮೆಯನ್ನು ಎತ್ತಲು ಜಗದಾತ್ಮನು ಅವನ ಆಳಾಗಿ ಬಂದನು. ॥95॥ ಸಂತರ ಮಹತ್ವವನ್ನು ತಿಳಿದು ದೇವಾಧಿದೇವನು ಸಂತರ ಮನೆಯಲ್ಲಿ ನೀರೆತ್ತುವ ಕಾರ್ಯವನ್ನು ಮಾಡಿದನು. ಆದ್ದರಿಂದ ಸಂತರು ನಿಜವಾಗಿಯೂ ದೇವರ ಯಜಮಾನರು. ಏಕೆಂದರೆ ದೇವನು ತನ್ನ ಭಕ್ತನಿಗಾಗಿ ಎಲ್ಲ ಕಷ್ಟವನ್ನು ಸಹಿಸಿ ಆಳಾಗಿ ಸಂತರ ಮನೆಯಲ್ಲಿ ದುಡಿದಿದ್ದಾನೆ. ॥96॥ ಈಗ ಇದರ ಬಗ್ಗೆ ಹೆಚ್ಚಿಗೆ ಹೇಳಬೇಕಾದ ಆವಶ್ಯಕತೆ ಏನೂ ಇಲ್ಲ. ನೀನು





ನಮ್ಮ ತಂದೆ-ತಾಯಿ. ಹೇ ಸದ್ಗುರು ಸಾಯಿನಾಥನೇ ಶಿರಡಿ ಗ್ರಾಮದ ವಾಸಿಯೇ. ॥97॥ ಬಾಬಾ ಸಂತ ಶ್ರೇಷ್ಠನಾದ ನಿನ್ನ ಲೀಲೆಯನ್ನು ನಿಜವಾಗಿಯೂ ಯಾರೂ ವರ್ಣನೆ ಮಾಡಲಾರರು. ನನ್ನಂತಹ ಸಾಮನ್ಯನ ಪಾಡೇನು? ॥98॥ ಜಡಜೀವಿಗಳನ್ನು ಉದ್ಧರಿಸಲೆಂದು ತಾವು ಶಿರ್ಡಿಗೆ ಬಂದು ನೆಲೆಸಿದ್ದೀರಿ. ಪಣತಿಯಲ್ಲಿ ನೀರನ್ನು ಸುರಿದು ಅದನ್ನು ಉರಿಸಿದ್ದೀರಿ. ॥99॥ ಅಳತೆ ಗೋಲಿನಂತಹ ತುಂಡು ಹಲಗೆಯನ್ನು ತೂಗುಮಂಚವನ್ನಾಗಿಸಿ ನಿಮ್ಮ ಯೋಗಶಕ್ತಿಯ ಸಾಮರ್ಥ್ಯವನ್ನು ಭಕುತರಿಗೆ ತೋರಿಸಿದ್ದೀರಿ. ॥100॥ ಎಷ್ಟೋ ಮಾತೆಯರ ಬಂಜೆಯತನವನ್ನು ನಿರ್ಮೂಲಗೊಳಿಸಿದ್ದೀರಿ. ಎಷ್ಟೋ ಜನರ ರೋಗವನ್ನು ವಿಭೂತಿಯಿಂದ ಗುಣಪಡಿಸಿದ್ದೀರಿ. ॥101॥ ಜಗದ ದು:ಖವನ್ನು ನಿವಾರಿಸಲು ನಿನಗೇನೂ ಕಷ್ಟವಲ್ಲ ಅದು ದು:ಸಾಧ್ಯವೂ ಅಲ್ಲ. ಇರುವೆಯ ಭಾರವನ್ನು ಆನೆಯು ಭಾರವೆಂದು ಪರಿಗಣಿಸುವುದೇ? ॥102॥ ಈಗ ಅದಿರಲಿ ಗುರುರಾಯಾ. ಈ ದಿನನ ಮೇಲೆ ದಯಮಾಡು. ನಾನೆಲ್ಲವನ್ನು ತ್ಯಜಿಸಿ ನಿಮ್ಮ ಪಾದಗಳಿಗೆ ಶರಣಾಗಿದ್ದೇನೆ. ಆದ್ದರಿಂದ ನನ್ನನ್ನು ದಯವಿಟ್ಟು ದೂರತಳ್ಳಬೇಡಿರಿ. ॥103॥ ನೀನು ರಾಜಾಧಿರಾಜರುಗಳ ಮಹಾರಾಜನು. ನೀನು ಕುಬೆರನಿಗಿಂತಲೂ ಕುಬೇರನು. ನೀನು ವೈದರುಗಳ ವೈದನು. ನಿನಗಿಂತ ಶ್ರೇಷ್ಠನಾದವನು ಈ ಮೂರು ಲೋಕದಲ್ಲಿ ಯಾರೂ ಇಲ್ಲ. ॥104॥ ಬೇರೆ ಬೇರೆ ದೇವತೆಗಳನ್ನು ಪೂಜಿಸಲು ವಿಶೇಷ ವಸ್ತುಗಳಿವೆ. ಆದರೆ ನಿನ್ನ ಪೂಜೆಗಾಗಿ ಅರ್ಪಿಸುವಂತಹ ಸಾಹಿತ್ಯಗಳು ಈ ಮೂರು ಲೋಕದಲ್ಲಿ ಇಲ್ಲವೇ ಇಲ್ಲ. ॥105॥ ನೋಡಿ ಸೂರ್ಯನು ಬೆಳಕಿನ ಆದಿದೇವತೆ. ಅವನ ರಾಜ್ಯದಲ್ಲಿ ದೀಪಾವಳಿ ಬಂದಿದೆ. ಆದರೆ ಅದನ್ನು ಆಚರಿಸಲು ಅದಕ್ಕೆ ಬೇಕಾಗುವಂತಹ ಯಾವುದೇ

ಸಾಮಗ್ರಿಗಳು ಇಲ್ಲವೇ ಇಲ್ಲ. ॥106॥ ಮಹಾಸಾಗರದ ದಾಹವನ್ನು ತಣಿಸಲು ತಕ್ಕಂತಹ ನೀರು ಈ ಭೂಮಿಯಲ್ಲಿ ಎಲ್ಲಿಯೂ ಸಿಗುತ್ತಿಲ್ಲ. ಅಗ್ನಿದೇವನಿಗೆ ಶಾಖ ಕೊಡಲು ಶಾಖ ಎಲ್ಲಿಂದ ತರಲಿ. ॥107॥ ಪೂಜೆಗೆ ಯಾವ ಯಾವ ಪದಾರ್ಥ ಬೇಕೋ ಅದರಲ್ಲೆಲ್ಲ ನೀನು ತುಂಬಿರುವೆ. ಅವೆಲ್ಲವೂ ಆದಿಯಿಂದಲೂ ನಿನ್ನ ಅಂಶವೇ ಆಗಿದೆ. ಓ ಸಮರ್ಥ ಗುರುರಾಯನೇ. ॥108॥ ಈ ಮೊದಲು ಹೇಳಿದ್ದೆಲ್ಲವೂ ತಾತ್ವಿಕ ಹರಟೆ ಎಂದೆಣಿಸಬಹುದು. ಆದರೆ ನಿನ್ನ ಮನಸ್ಥಿತಿ ಹಾಗಿಲ್ಲ. ನಾನು ಈ ಅನುಭವವಿಲ್ಲದೇ ಆಡಿದ ಶಬ್ದಜಾಲವು ನಿರರ್ಥಕವಾಯಿತು. ॥109॥ ಒಂದು ವೇಳೆ ವ್ಯವಹಾರಿಕ ಪೂಜೆ ನನ್ನಿಂದ ಮಾಡಿಸಬೇಕಾದರೆ ಹೇಳು. ಅದನ್ನು ಮಾಡಲು ನಾನು ಸಮರ್ಥನಲ್ಲ. ನನ್ನ ಪ್ರಿಯ ಗುರುರಾಯಾ ॥110॥ ನನ್ನ ಹೆಚ್ಚಿನ ಕಲ್ಪನಾಶಕ್ತಿಯಿಂದ ನಾನು ನಿನ್ನ ಮಾನಸ ಪೂಜೆಯನ್ನು ಮಾಡುತ್ತೇವೆ. ಆ ಕಲ್ಪನಾ ಪೂಜೆಯನ್ನೇ ದಯಾಮಯಿಯಾದ ನೀನು ಈ ದಾಸನಿಂದ ಸ್ವೀಕರಿಸು. ॥111॥ ನನ್ನ ಪ್ರೇಮದ ಅಶ್ರು ಬಿಂದುಗಳಿಂದ ನಿಮ್ಮ ಪಾದಕಮಲಗಳನ್ನು ತೊಳೆಯುತ್ತೇನೆ. ನನ್ನ ಭಕ್ತಿಯೆಂಬ ಚಂದನವನ್ನು ತೇದು ಅದರ ಲೇಪವನ್ನು ನಿಮಗೆ ತಿಲಕದಂತೆ ಇಡುತ್ತೇನೆ. ॥112॥ ಈ ಕಲ್ಪನಾಶಬ್ದಗಳ ಉದ್ದ ನಿಲುವಂಗಿ (ಕಫನಿ)ಯನ್ನು ನಿಮಗೆ ತೊಡಿಸುತ್ತೇನೆ. ಹೃತ್ಪೂರ್ವಕವಾದ ಈ ಭಜನೆಯ ಹಾರವನ್ನು ನಿಮ್ಮ ಕತ್ತಿಗೆ ಹಾಕುತ್ತೇನೆ. ॥113॥ ದುಷ್ಟತನವೆಂಬ ಊದುಬತ್ತಿಯನ್ನು ನಿಜವಾಗಿಯೂ ನಿಮ್ಮ ಮುಂದೆ ಉರಿಸುತ್ತೇನೆ. ಅದು ಅಸಹ್ಯ ಮಲಿನ ದ್ರವ್ಯಗಳಿಂದಾದರೂ ಆದರಿಂದ ಅಲ್ಲಿ ಯಾವುದೇ ರೀತಿಯ ದುರ್ಗಂಧವೇಳುವುದಿಲ್ಲ. ॥114॥ ಒಂದೊಂಮ್ಮೆ ದುರ್ಗಂಧವೆಂಬ ಇಂತಹ ಧೂಪವನ್ನು ಸದ್ಗುರುವಿನ ಹೊರತು ಇತರ ಸ್ಥಳದಲ್ಲಿ ಉರಿಸಿದರೆ ಆಗ ಧೂಪ ದ್ರವ್ಯದಿಂದ





ಹೊರಟ ದುರ್ಗಂಧವು ಈ ರೀತಿಯಾಗುತ್ತದೆ. ॥115॥ ಧೂಪದ್ರವ್ಯಕ್ಕೆ ಅಗ್ನಿಯ ಸ್ಪರ್ಶವಾದ ತಕ್ಷಣವೇ, ಅದರೊಳಗಿನ ಸುವಾಸನೆ ಹಾಗೂ ಸದ್ಗುಣವು ಆದನ್ನು ಬಿಟ್ಟು ಹೊರಟು ಅಲ್ಲಿ ಕೇವಲ ದುರ್ಗಂಧವೇ ವ್ಯಾಪಿಸುತ್ತದೆ. ॥116॥ ಆದರೆ ತಮ್ಮ ಮುಂದೆ ವಿರುದ್ಧವಾಗುತ್ತದೆ. ದುರ್ಗಂಧ ಕೆಟ್ಟತನ, ದುರ್ಗುಣಗಳು ಎಲ್ಲವೂ ಅಗ್ನಿಯಲ್ಲಿ ಸುಟ್ಟು ಭಸ್ಮವಾಗುತ್ತವೆ. ಸದ್ಗುಣವೂ ಈ ಜಗದಲ್ಲೆಲ್ಲ ಅಕ್ಷಯ ಎಂದು ಸಾರುವಂತೆ ಶಾಶ್ವತವಾಗಿ ಉಳಿಯುತ್ತದೆ. ॥117॥ ಒಂದೊಮ್ಮೆ ಮನದ ದುಷ್ಟತನವನ್ನು ಸುಟ್ಟು ಹಾಕಿದರೆ ಮನಸ್ಸು ಶುದ್ಧವಾಗುತ್ತದೆ. ಗಂಗೆಯ ಅಶುದ್ಧತೆಯು ಹೋದರೆ ಗಂಗೆಯು ಸಹಜವಾಗಿಯೇ ಪವಿತ್ರಳು. ॥118॥ ಮಾಯೆ ಮೋಹನವೆಂಬ ದೀಪವನ್ನು ನಾನು ನಿಮ್ಮ ಮುಂದೆ ಉರಿಸುತ್ತೇನೆ. ಆದ್ದರಿಂದ ವೈರಾಗ್ಯ ವೃತ್ತಿಯೆಂಬ ಮಿಂಚನ್ನು ನನಗೆ ದಯಪಾಲಿಸು. ಓ ಗುರುರಾಯಾ. ॥119॥ ಬಾಬಾ ನಿಮಗೆ ಕುಳಿತುಕೊಳ್ಳಲು ದೃಢ ವಿಶ್ವಾಸವೆಂಬ ಸಿಂಹಾಸನವನ್ನು ನೀಡುತ್ತೇನೆ. ಆದನ್ನು ಗ್ರಹಣಮಾಡಿ ಭಕ್ತಿಯೆಂಬ ನೈವೇದ್ಯವನ್ನು ಸ್ವಿಕಾರ ಮಾಡಿರಿ. ॥120॥ ಭಕ್ತಿಯ ನೈವೇದ್ಯವನ್ನು ನೀವು ಸ್ವೀಕರಿಸಿರಿ. ಅದರ ಸುಗಂಧ ಅಥವಾ ಸಾರವನ್ನು ನನಗೆ ನೀಡು. ಏಕೆಂದರೆ ನಾನು ನಿಮ್ಮ ಮಡಿಲಿನಲ್ಲಿರುವ ಹಸುಳೆ. ನನಗೆ ನಿಮ್ಮ ಹಾಲಿನ ಹಕ್ಕು ಇದ್ದೇ ಇದೆ. ॥121॥ ನನ್ನ ಮನಸ್ಸೇ ನಾನು ನೀಡುವ ದಕ್ಷಿಣೆಯು. ಅದನ್ನು ನಾನು ಮನಪೂರ್ವಕವಾಗಿ ನಿಮಗೆ ನೀಡುತ್ತೇನೆ. ಆದ್ದರಿಂದ ಇನ್ನು ನನ್ನದೆನ್ನುವದೇನೂ ನನ್ನಲ್ಲಿ ಇಲ್ಲವೇ ಇಲ್ಲ. ॥122॥ ಈಗ ಭಕ್ತಿಯಿಂದ ಪ್ರಾರ್ಥನಾಪೂರ್ವಕವಾಗಿ ನಿಮಗೆ ಉದ್ದಂಡ ನಮಸ್ಕಾರವನ್ನು ಮಾಡುತ್ತೇನೆ. ಆದನ್ನು ಸ್ವೀಕರಿಸಿರಿ. ಅದು ನಿಮಗೆ ಮಾನ್ಯವಾಗಲಿ ಓ ಶ್ರೇಷ್ಠಗುರು ಸಾಯಿನಾಥನೇ. ॥123॥

ಕೆಳಗೆ ಕೊಟ್ಟಿರುವ ಪ್ರಾರ್ಥನೆಯನ್ನು ಹೇಳಿ ನಿಮಗೆ ಉದ್ದಂಡ ನಮಸ್ಕಾರವನ್ನು ಮಾಡುತ್ತೇನೆ. ಅದನ್ನು ನೀವು ಸ್ವಿಕರಿಸಿರಿ ಗುರುರಾಯಾ.

## ॥ ಪ್ರಾರ್ಥನಾಷ್ಟಕ ಶ್ಲೋಕ ॥

ಶಾಂತ ಮನಸ್ಸಿನ ಅತ್ಯಂತ ವಿವೇಕಿ ದಯಾಮಯಿಯಾದ ಸಾಯಿನಾಥನೇ ವಿಶಾಲಸಾಗರದಂತೆ ದಯೆ ಉಳ್ಳವನೇ ಅಜ್ಞಾನವೆಂಬ ಕತ್ತಲನ್ನು ನಾಶಪಡಿಸುವಾತನೇ ॥124॥ ಯಾವುದೇ ಜಾತಿಕುಲವೆಂಬ ಭೇದವಿಲ್ಲದೇ ಅತೀವ ಕರುಣಾಸಾಗರನೇ. ಅರಿವಿನ ಭಂಡಾರ. ಕೃಪಾಸಾಗರರನೇ ನಮ್ಮನ್ನು ಕಾಯು ಶಿರ್ಡಿ ಗ್ರಾಮದ ನಿವಾಸಿಯೇ. ॥125॥ ಜ್ಞಾನಿಕಾಶದ ಸೂರ್ಯನೇ. ಎಲ್ಲರಿಗೂ ಶುಭವನ್ನುಂಟುಮಾಡುವಾತನೇ ಭಕುತರ ಚಿತ್ತವನ್ನು ಎಕತ್ರ ಮಾಡುವವನು ನಿನಗೆ ಶರಣು ಬಂದವರನ್ನು ರಕ್ಷಿಸು. ॥126॥ ನೀನು ಬ್ರಹ್ಮದೇವನು. ಈ ಜಗದ ಸೃಷ್ಟಿಕರ್ತನು. ನೀನು ವಿಷ್ಣುವೇ ಈ ಜಗದ ಸಂರಕ್ಷನು. ಮೂರು ಲೋಕಗಳನ್ನು ಲಯ ಮಾಡುವವ ನೀನು. ನಿಶ್ಚಯವಾಗಿಯೂ ಪ್ರಳಯರುದ್ರನು. ॥127॥ ನೀನಿಲ್ಲದ ಜಗ ಯಾವುದಿದೆ? ಈ ಜಗದಲ್ಲಿ ನಿನ್ನನ್ನು ಬಿಟ್ಟು ಸರ್ವವ್ಯಾಪಿ ಯಾರೂ ಇಲ್ಲ ಓ ಸಾಯಿನಾಥನೇ ನೀನು ಸರ್ವಜ್ಞನು ಎಲ್ಲರ ಹೃದಯ ನಿವಾಸಿ. ॥128॥ ಎಲ್ಲರ ಎಲ್ಲ ಪಾಪಗಳನ್ನು ಕ್ಷಮಿಸಿರಿ ಎಂದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಸಂಶಯ ಮತ್ತು ತಪ್ಪು ತಿಳುವಳಿಕೆಯ ಪ್ರವಾಹವು





ಶೀಘ್ರವಾಗಿಯೇ ನಾಶವಾಗಲಿ. ॥129॥ ನೀನು ಗೋಮಾತೆಯೂ, ನಾನು ನಿನ್ನ ಮಗುವು. ನೀನು ಚಂದ್ರನು. ನಾನು ಅದರ ಬೆಳಕಿನಿಂದ ಕರಗಿರುವ ಕಲ್ಲು ಆದರ ಪೂರ್ವಕವಾಗಿ ಈ ದಾಸನು ಗಂಗೆಯಂತೆ ಶುದ್ಧ ಪವಿತ್ರವಾದ ಈ ಸ್ವರ್ಣಪಾದಗಳಿಗೆ ನಮಸ್ಕರಿಸುತ್ತೇನೆ. ॥130॥ ನಿನ್ನ ಕರಗಳೆರಡನ್ನು ನನ್ನ ಶಿರದ ಮೇಲೆ ಇಟ್ಟು ಆಶಿರ್ವದಿಸು. ದು:ಖ ಚಿಂತೆಗಳ ನಿವಾರಣೆಯಾಗಲಿ. ಈ ದಾಸಗಣೂ ದಾಸನು ನಿನ್ನ ಗುಲಾಮನು. ॥131॥ ಈ ಪ್ರಾರ್ಥನಾಷ್ಟಕವನ್ನು ಹೇಳಿ ನಿನಗೆ ನನ್ನ ಸಾಷ್ಟಾಂಗ ನಮಸ್ಕಾರಗಳು ನನ್ನ ಈ ಪಾಪ ತಾಪ ಮತ್ತು ದಾರಿದ್ರ್ಯ ಬೇಗನೆ ನಿವಾರಣೆಯಾಗಲಿ. ॥132॥ ನೀನು ಹಾಲನ್ನು ನೀಡುವ ಹಸುವು ಹಸುವು ನೀನು ಮಾತೆಯು. ನಾನು ನಿನ್ನ ಕಂದನು. ನೀನು ನನ್ನ ಬಗ್ಗೆ ಯಾವುದೇ ರೀತಿಯ ಕಠೋರತೆಯನ್ನು ಮನದಲ್ಲಿ ಇಟ್ಟುಕೊಳ್ಳಬೇಡಾ ॥133॥ ನೀನು ಹಿಮಗಿರಿಯ ತಂಪನ್ನು ನೀಡುವ ಚಂದನದ ವೃಕ್ಷವು. ನಾನು ಮುಳ್ಳು ಕಂಠಿಯ ಪೊದೆಯು. ನೀನು ಎಲ್ಲರ ತೃಷೆಯನ್ನು ಇಂಗಿಸುವ ಗೋದಾಮಾತೆಯು. ನಾನು ಮಹಾಪಾತಕಿಯು. ॥134॥ ಒಂದೊಮ್ಮೆ ನಿನ್ನ ದರ್ಶನ ಮಾಡಿದ ಅನಂತರ ನನ್ನ ಮನದ ಮಲಿನತ್ವವು ಹಾಗೆಯೇ ಉಳಿದರೆ ನಿನ್ನನ್ನು ಚಂದನವೆಂದು ಯಾರು ಕರೆಯುತ್ತಾರೆ. ॥135॥ ಕಸ್ತೂರಿಯ ಸಹವಾಸದಿಂದಾಗಿ ಧೂಳು ಕೂಡಾ ಬೆಲೆಯುಳ್ಳದ್ದಾಗಿರುತ್ತದೆ. ಪುಷ್ಪದ ಪರಿಮಳದಿಂದ ದಾರವೂ ಕೂಡ ಸುವಾಸನೆಯುಳ್ಳದ್ದಾಗುತ್ತದೆ. ಹಾಗೂ ದೇವರ ಮುಡಿಗೇರುತ್ತದೆ. ॥136॥ ಸಜ್ಜನರ ರೀತಿಯೂ ಇದೇ ರೀತಿ ಇರುತ್ತದೆ. ಅವರ ಸತ್ಸಂಗಕ್ಕೆ ಬರುವ ಎಲ್ಲ ವಸ್ತುಗಳನ್ನು ಅವರು ತಮ್ಮಂತೆ ಎತ್ತರದ ಸ್ಥಾನಕ್ಕೆ ಕರೆದೊಯ್ಯುತ್ತಾರೆ. ॥137॥ ಭಸ್ಮ ಕೌಪಿನ ಮತ್ತು ನಂದಿ ಇವುಗಳನ್ನು ಸಾಕ್ಷಾತ ಶಿವನೇ

ಅರಿಸಿದ್ದಾನೆ. ಆದ್ದರಿಂದ ಈ ವಸ್ತುಗಳ ಗೌರವ ನಾಲ್ಕು ದಿಕ್ಕುಗಳಲ್ಲಿ ಆಗುತ್ತಲಿದೆ. ॥138॥ ಗೋಪಗೋಪಿಕೆಯರ ಮನರಂಜಿಸಲು ಯಮುನೆಯ ತೀರ ಬೃಂದಾವನದಲ್ಲಿ ಜಗನ್ನಿಯಾಮಕನಾದ ಶ್ರೀಕೃಷ್ಣನು ದಧಿ ಹಂಡಿಯ ಆಟವಾಡಿದನು. ಅದೂ ಕೂಡಾ ಜ್ಞಾನಿಗಳಿಂದ ಈ ಜಗದಲ್ಲಿ ಸ್ವೀಕರಿಸಲ್ಪಟ್ಟಿದೆ. ॥139॥ ಹಾಗೆಯೇ ನಾನೊಬ್ಬ ಪಾಪಿಷ್ಠನು. ಆದರೆ ತಮ್ಮ ಸೇವೆಗೆ ಹಾಜರಿರುವ ಸೇವಾಗುಲಾಮನು ಆದ್ದರಿಂದ ನಿಮ್ಮ ಹೃದಯದಲ್ಲಿ ನನ್ನ ಸ್ಥಾನವೇನೆಂಬುದನ್ನು ಯೋಚಿಸು ಗುರುರಾಯಾ. ॥140॥ ಐಹಿಕದಲ್ಲಿಯೂ ಅಥವಾ ಪರಮಾರ್ಥದಲ್ಲಿಯೂ ಯಾವುದೆಲ್ಲ ವಸ್ತುವು ನನ್ನ ಸಂತೋಷಕ್ಕೆ ಅವಶ್ಯವೋ. ಅದನ್ನು ನೀನು ಪೂರೈಸುತ್ತಿ ಎಂಬುದರಲ್ಲಿ ನನಗೆ ಯಾವುದೇ ರಿತಿಯ ಸಂಶಯವಿಲ್ಲ. ॥141॥ ನಿನ್ನ ಕೃಪೆಯಿಂದ ನನ್ನ ಮನಸ್ಸು ಹಿಡಿತಕ್ಕೆ ತನ್ನಿ. ಒಂದು ವೇಳೆ ಸಾಗರದ ನೀರನ್ನು ಸಿಹಿಯಾಗಿಸಿದರೆ ಕ್ಷಾರತನದ ಭೀತಿ ಅಲ್ಲಿ ಇಲ್ಲವೇ ಇಲ್ಲ. ॥142॥ ಸಾಗರದ ಜಲವನ್ನು ಸಿಹಿಯಾಗಿಸುವ ಶಕ್ತಿ ನಿನಗೆ ಇದ್ದೇ ಇದೆ. ಆದ್ದರಿಂದ ತಮ್ಮ ಈ ದಾಸನಾದ ದಾಸಗಣೂವಿನ ಯಾಚನೆಯನ್ನು ದಯವಿಟ್ಟು ಒಪ್ಪಿಕೊಂಡು ಪೂರ್ತಿಮಾಡು ಗುರುರಾಯನೇ. ॥143॥ ನನ್ನಲ್ಲಿ ಏನೇನು ಕುಂದು ಕೊರತೆಗಳಿವೆಯೊ, ಅವೆಲ್ಲವೂ ಪ್ರತಿಯೊಂದು ನಿನ್ನವು ಸಿದ್ಧರುಗಳ ರಾಜನು ನೀನು. ನಿನಗೆ ಈ ಕುಂದು ಕೊರತೆಗಳು ಯೋಗ್ಯವಲ್ಲ. ॥144॥ ಈಗ ನಾನು ಹೆಚ್ಚಿಗೆ ಏನನ್ನೂ ಏಕೆ ಹೇಳಲಿ? ನೀನೊಬ್ಬನೇ ನನ್ನ ಆಧಾರವು. ಮಗುವು ತಾಯಿಯ ಮಡಿಲಲ್ಲಿ ಹೇಗೆ ಸುರಕ್ಷಿತವೋ ಹಾಗೆ ನಾನು ಸುರಕ್ಷಿತ. ॥145॥ ಈ ದೇವನಾಮದ ಪ್ರಶಂಸೆ ಇಂತಿರಲಿ. ಈ ಶ್ಲೋಕವನ್ನು ಯಾರು ಯಾರು ಪ್ರೇಮದಿಂದ ಓದುತ್ತಾರೋ, ಅಂಥವರ ಆಸೆ ಆಕಾಂಕ್ಷೆಗಳನ್ನು ದಯವಿಟ್ಟು





ಪೂರ್ತಿಗೊಳಿಸು ಮಹಾರಾಜನೇ. ॥146॥ ಈ ಶ್ಲೋಕದ ಮೇಲೆ ನಿನ್ನ ಆಶೀರ್ವಾದವೂ ಇರಲಿ. ಓದುಗರ ತ್ರಿತಾಪವೂ ಒಂದೇ ಒಂದು ವರುಷದಲ್ಲಿ ದೂರವಾಗಲಿ. ॥147॥ ಪ್ರತಿನಿತ್ಯವೂ ಶುಚಿರ್ಭೂತವಾಗಿ ಶುದ್ಧಭಾವ, ದೃಢನಂಬಿಕೆ ನಿಮ್ಮ ಹೃದಯದಲ್ಲಿ ಇಟ್ಟು ಪ್ರತಿನಿತ್ಯವೂ ಈ ಸ್ತೋತ್ರವನ್ನು ಪಠಣ ಮಾಡಿರಿ. ॥148॥ ಇದು ಅಶಕ್ಯವಾದರೆ ಪ್ರತಿಗುರುವಾರದಂದು ನಿಮ್ಮ ಮನದಲ್ಲಿ ಸದ್ಗುರುವಿನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಈ ಸ್ತೋತ್ರವನ್ನು ಪಠಣ ಮಾಡಿರಿ. ॥149॥ ಒಂದೊಮ್ಮೆ ಇದೂ ಕೂಡಾ ಅಸಾಧ್ಯವಾದರೆ, ಪ್ರತಿ ಏಕಾದಶಿಯಂದು ಈ ಸ್ತೋತ್ರ ಪಠಿಸಿರಿ ಅದರ ಪರಿಣಾಮವನ್ನು ನೀವೇ ಗಮನಿಸಿ. ॥150॥ ಸ್ತೋತ್ರ ಪಾಠಕರಿಗೆ ಗುರುರಾಯರು ಕಟ್ಟಕಡೆಗೆ ಪೂರ್ಣ ವಿಮೋಚನೆಯನ್ನು ನೀಡುತ್ತಾರೆ. ಐಂಹಿಕ ಆಶೆಗಳನ್ನು ತತ್‌ಕ್ಷಣವೇ ಪೂರೈಸುತ್ತಾರೆ. ಓ ಕೇಳುಗರೇ. ॥151॥ ಈ ಸ್ತೋತ್ರವನ್ನು ಪಠಿಸುವದರಿಂದ ಮೂರ್ಖರು ಬುದ್ಧಿವಂತರಾಗುತ್ತಾರೆ. ಯಾರಾದರೂ ಆಯುಷ್ಯ ಕಡಿಮೆ ಇದ್ದರೆ ಇದನ್ನು ಓದುವುದರಿಂದ ಶತಾಯುಗಳಾಗುತ್ತಾರೆ. ॥152॥ ಯಾರು ಧನಹೀನ ದರಿದ್ರರೋ ಸಾಕ್ಷಾತ್ ಕುಬೇರನೇ ಅವರ ಮನೆಗೆ ಬಂದಿಳಿಯುತ್ತಾನೆ. ಇವೆಲ್ಲವೂ ಈ ಸ್ತೋತ್ರವನ್ನು ಓದುವುದರಿಂದ ಆಗುತ್ತದೆ. ಇದು ಸತ್ಯ ಸತ್ಯ ತ್ರಿವಾರ ಸತ್ಯ. ॥153॥ ಸಂತತಿಹೀನ ಸ್ತ್ರೀಯರು ಈ ಸ್ತೋತ್ರವನ್ನು ಓದುವುವುದರಿಂದ ಅವರಿಗೆ ಸಂತಾನ ಪ್ರಾಪ್ತಿಯಾಗುತ್ತದೆ. ಈ ಸ್ತೋತ್ರವನ್ನು ಓದುವವರ ರೋಗರುಜಿನಗಳು ನಾಶವಾಗುತ್ತವೆ. ॥154॥ ಭಯಚಿಂತೆಗಳ ನಾಶವಾಗುತ್ತದೆ. ಎಲ್ಲರಿಂದಲೂ ಮಾನ್ಯತೆ ಸಿಗುತ್ತದೆ. ಅವಿನಾಶ ಪರಬ್ರಹ್ಮನ ಅನುಭವವನ್ನು ಹೊಂದುತ್ತಾರೆ. ಇವೆಲ್ಲವೂ ಈ ಸ್ತವನಮಂಜರಿಯ ನಿತ್ಯ ಪಠಣದಿಂದ ಸಾಧ್ಯ. ॥155॥ ಓ

ಜ್ಞಾನಿಗಳೇ ಈ ಸ್ತೋತ್ರದ ಬಗ್ಗೆ ನಿಮ್ಮ ಹೃದಯದಲ್ಲಿ ಪೂರ್ಣ ವಿಶ್ವಾಸವಿರಲಿ. ಸಂಶಯ, ನಾಸಿಕತೆ, ತಪ್ಪು ಗ್ರಹಿಕೆಗಳಿಗೆ ಈ ಸ್ತೋತ್ರದ ಬಗ್ಗೆ ಎಲ್ಲೂ ಆಸ್ಪದ ಕೊಡಬೇಡಿ. ॥156॥ ಶಿರಡಿಕ್ಷೇತ್ರದ ದರ್ಶನಮಾಡಿ, ಬಾಬಾನ ಚರಣಕಮಲಗಳಿಗೆ ಮನಃಪೂರ್ವಕವಾಗಿ ನಮಸ್ಕರಿಸಿರಿ. ಅನಾಥರ ಬಂಧು. ಅವನೇ ಭಕುತರ ಆಸೆ ಆಕಾಂಕ್ಷೆಗಳನ್ನು ಈಡೇರಿಸುವ ಕಲ್ಪವೃಕ್ಷ. ॥157॥ ಅವನ ಪ್ರೇರಣೆಯಿಂದ ಈ ಸ್ತೋತ್ರವನ್ನು ಬರೆದಿದ್ದೇನೆ. ಇಲ್ಲದಿದ್ದರೆ ನನ್ನಂತಹ ಪಾಮರನಿಂದ ಇಂತಹರಚನೆಯು ಹೇಗೆ ಸಾಧ್ಯ ? ॥158॥ ಶಕೆ 1840 ಬಾದ್ರಪದ ತಿಂಗಳಿನ ಶುಕ್ಲಪಕ್ಷದ ಗಣೇಶ ಚತುರ್ಥಿಯ ದಿನ ಸೋಮವಾರದ ಎರಡನೆ ಪ್ರಹರದಲ್ಲಿ ರಚನೆಯಾಯಿತು. ॥159॥ ಶ್ರಿ ಸಾಯಿನಾಥನ ಈ ಸ್ತವನಮಂಜರಿಯು ಮಹೇಶ್ವರದಲ್ಲಿ ಪುನೀತ ನರ್ಮದೆಯ ತೀರದಲ್ಲಿ ಶ್ರೀ ಅಹಲ್ಯಾದೇವಿಯ ಸನ್ನಿಧಿಯಲ್ಲಿ ಪೂರ್ಣವಾಯಿತು. ॥160॥ ಮಹೇಶ್ವರದ ಪ್ರಸಿದ್ಧ ತೀರ್ಥಸ್ಥಾನದಲ್ಲಿ ಈ ಸ್ತವನಮಂಜರಿಯು ಪೂರ್ಣಗೊಂಡಿತು. ಶ್ರಿ ಸಾಯಿನಾಥರು ನನ್ನ ಮನದಲ್ಲಿ ಒಂದಾಗಿ ಸೇರಿ ನನ್ನಿಂದ ಪ್ರತಿ ಶಬ್ದವು ಮೂಡುವಂತೆ ಮಾಡಿದರು. ॥161॥ ದಾಮೊದರ ಹೆಸರಿನ ಲೇಖಕನಿಗೆ ಸ್ತವನಮಂಜರಿ ಬರೆಯುವ ಸಾಕ್ಷಾತ್ಕಾರವಾಯಿತು ಈ ದಾಸಗಣವು ಎಲ್ಲ ಸಂತಮಹಂತರುಗಳ ವಿಧೇಯ ಸೇವಕನು (ಇಲ್ಲಿ ಸಮಸ್ತ ಮಂಜರಿಯನ್ನು ದಾಸಗಣೂರವರು ದಾಮೋದರ ಎಂಬ ಹೆಸರಿನ ಲೇಖಕನಿಗೆ ಹೇಳುತ್ತ ಹೋದರು. ದಾಮೊದರನು ಅದನ್ನು ಬರೆದುಕೊಳ್ಳುತ್ತಿದ್ದನು). ॥162॥ ಶಾಂತಿಯು ಸದಾ ನಿಮ್ಮಲ್ಲಿ ನೆಲೆಸಿರಲಿ ಈ ಸಾಯಿನಾಥನ ಸ್ತುತಿಯಾದ ಸ್ತವನಮಂಜರಿಯ ಈ ನಮ್ರ ಕಾಣಿಗೆಯು ಭವಸಾಗರವನ್ನು ಪಾರು ಮಾಡಲು ನಿಮಗೆ ಸಹಾಯ ಮಾಡಲಿ. ಪಾಂಡುರಂಗನಾದ ಶ್ರಿ





ಸಾಯಿಗೆ ದಾಸಾನುದಾಸನಾದ ದಾಸಗಣುವಿನ ವಿಧೇಯತೆ ವಿಶ್ವಾಸ ಹಾಗೂ ಗೌರವದ ಪ್ರಾರ್ಥನೆ ಇದಾಗಿದೆ. ಈ ಪ್ರಾರ್ಥನೆಯು ಶ್ರೀ ಹರಿಹರರಿಗೆ ಅರ್ಪಣೆಯಾಗಲಿ ಸಕಲರಿಗೂ ಶುಭವಾಗಲಿ. ಪುಂಡಲೀಕ ಹರಿ ವಿಠ್ಠಲ ಸೀತಾಕಾಂತನಾದ ಶ್ರೀರಾಮನನ್ನು ಸ್ಮರಿಸಿ. ಎಲ್ಲರಿಗೂ ಜೈ ಜೈ ಕಾರವಾಗಲಿ ಪಾರ್ವತಿ ಪತೇ ಹರಹರ ಮಹಾದೇವ.

ಶ್ರೀ ಸದ್ಗುರು ಸಾಯಿನಾಥ ಮಹಾರಾಜರಿಗೆ ಜಯವಾಗಲಿ.

ಶ್ರೀ ಸದ್ಗುರು ಸಾಯಿನಾಥ !

ಈ ಕೃತಿಯನ್ನು ನಾನು ನಿನಗೆ ಅರ್ಪಿಸುತ್ತೇನೆ. ಎಲ್ಲರಿಗೂ ಶುಭವಾಗಲಿ.

॥ ಓಂ ॥

ಶ್ರೀ ಸಾಯಿನಾಥನು ಎಲ್ಲರಿಗೂ ಪ್ರಸನ್ನನಾಗಲಿ

॥ ಓಂ ॥

॥ ಶ್ರೀ ಸಾಯಿನಾಥ ಸುಪ್ರಸನ್ನ ॥ ಗುರುಬ್ರಹ್ಮಾ ಗುರುರ್ವಿಷ್ಣು ಗುರು ದೇವೋ ಮಹೇಶ್ವರ : ಗುರುಸಾಕ್ಷಾತ್ಪರಬ್ರಹ್ಮ ತಸ್ಮೇ ಶ್ರೀ ಗುರುವೇ ನಮ: ಶ್ರೀಮತ್ ಪರಬ್ರಹ್ಮಗುರುಂ ಸ್ಮರಾಮಿ ಶ್ರೀಮತ್ ಪರಬ್ರಹ್ಮಗುರುಂ ನಮಾಮಿ ಶ್ರೀಮತ್ ಪರಬ್ರಹ್ಮಗುರುಂ ಯಜಾಮಿ ಶ್ರೀಮತ್ ಪರಬ್ರಹ್ಮಗುರುಂ ಭಜಾಮಿ ಬ್ರಹ್ಮಾನಂದಂ ಪರಮಸುಖದಂ. ಕೇವಲಂ ಜ್ಞಾನಮೂರ್ತಿಂ, ದ್ವಂದ್ವಾತೀತಂ ಗಗನ ಸದೃಶಂ. ತತ್ವಮಸ್ಯಾದಿಲಕ್ಷ್ಯಮ್ ಏಕನಿತ್ಯಂ ವಿಮಲಮಚಲಂ.

ಸರ್ವಾಧಿಸಾಕ್ಷಿಭೂತಂ. ಭಾವಾತೀತಂ ತ್ರಿಗುಣರಹಿತಂ. ಸದ್ಗುರು ತಂ ನಮಾಮಿ. ನಿತ್ಯ ಶುದ್ಧಂ ನಿರಾಭಾಸಂ ನಿರಾಕಾರಂ ನಿರಂಜನಮ್. ನಿತ್ಯಬೋಧಂ ಚಿದಾನಂದಂ. ಸದ್ಗುರುಂ ತಂ ನಮಾಮ್ಯಹಮ್.

## ಶ್ರೀ ಸಾಯಿಬಾಬಾ ಅಷ್ಟೋತ್ತರ ಶತನಾಮಾವಳಿ :

1 ಓಂ ಶ್ರೀ ಸಾಯಿನಾಥಾಯ ನಮ:
2 ಓಂ ಶ್ರೀ ಲಕ್ಷ್ಮೀನಾರಾಯಣಾಯ ನಮ:
3 ಓಂ ಶ್ರೀ ಕೃಷ್ಣರಾಮ ಶಿವಮಾರುತ್ಯಾದಿರೂಪಾಯ ನಮ:
4 ಓಂ ಶೇಷಶಾಯಿನೇ ನಮ:
5 ಓಂ ಗೋದಾವರಿ ತಟ ಶೀಲಧಿವಾಸಿನೇ ನಮ:
6 ಓಂ ಭಕ್ತಹೃದಾಲಯಾಯ ನಮ:
7 ಓಂ ಸರ್ವಹೃನ್ನಿಲಯಾಯ ನಮ:
8 ಓಂ ಭೂತವಾಸಾಯ ನಮ:
9 ಓಂ ಭೂತಭವಿಷ್ಯದ್ಭಾವ ವರ್ಜಿತಾಯ ನಮ:
10 ಓಂ ಕಾಲಾತೀತಾಯ ನಮ:
11 ಓಂ ಕಾಲಾಯ ನಮ:





12 ಓಂ ಕಾಲಕಾಲಾಯ ನಮ:
13 ಓಂ ಕಾಲದರ್ಪದಮನಾಯ ನಮ:
14 ಓಂ ಮೃತ್ಯುಂಜಯಾಯ ನಮ:
15 ಓಂ ಅಮರ್ತ್ಯಾಯ ನಮ:
16 ಓಂ ಮರ್ತ್ಯಾಭಯ ಪ್ರಧಾಯ ನಮ:
17 ಓಂ ಜೀವಾಧಾರಾಯ ನಮ:
18 ಓಂ ಸರ್ವಾಧಾರಾಯ ನಮ:
19 ಓಂ ಭಕ್ತಾವನ ಸಮರ್ಥಾಯ ನಮ:
20 ಓಂ ಭಕ್ತವನ ಪ್ರತಿಜ್ಞಾಯ ನಮ:
21 ಓಂ ಅನ್ನ ವಸ್ತ್ರದಾಯ ನಮ:
22 ಓಂ ಆರೋಗ್ಯ ಕ್ಷೇಮದಾಯ ನಮ:
23 ಓಂ ಧನಮಾಂಗಲ್ಯಪ್ರದಾಯ ನಮ:
24 ಓಂ ಋದ್ಧಿ ಸಿದ್ಧಿದಾಯ ನಮ:
25 ಓಂ ಪುತ್ರ ಮಿತ್ರ ಕಲತ್ರ ಬಂಧುದಾಯ ನಮ:
26 ಓಂ ಯೋಗಕ್ಷೇಮ ವಹಾಯ ನಮ:
27 ಓಂ ಆಪದ್ಬಾಂಧವಾಯ ನಮ:
28 ಓಂ ಮಾರ್ಗಬಂಧವೇ ನಮ:

29 ಓಂ ಭುಕ್ತಿಮುಕ್ತಿಸ್ವರ್ಗಾಪವರ್ಗದಾಯ ನಮಃ
30 ಓಂ ಪ್ರಿಯಾಯ ನಮಃ
31 ಓಂ ಪ್ರೀತಿವರ್ಧನಾಯ ನಮಃ
32 ಓಂ ಅಂತರ್ಯಾಮಿಣೇ ನಮಃ
33 ಓಂ ಸಚ್ಚಿದಾತ್ಮನೇ ನಮಃ
34 ಓಂ ನಿತ್ಯಾನಂದಾಯ ನಮಃ
35 ಓಂ ಪರಮಸುಖದಾಯ ನಮಃ
36 ಓಂ ಪರಮೇಶ್ವರಾಯ ನಮಃ
37 ಓಂ ಪರಬ್ರಹ್ಮಣೇ ನಮಃ
38 ಓಂ ಪರಮಾತ್ಮನೇ ನಮಃ
39 ಓಂ ಜ್ಞಾನಸ್ವರೂಪಿಣೇ ನಮಃ
40 ಓಂ ಜಕತಃ ಪಿತ್ರೇ ನಮಃ
41 ಓಂ ಭಕ್ತಾನಾಂ ಮಾತೃಧಾತೃ ಪಿತಾಮಹಾಯ ನಮಃ
42 ಓಂ ಭಕ್ತಾಭಯಪ್ರದಾಯ ನಮಃ
43 ಓಂ ಭಕ್ತಾಪರಾಧೀನಾಯ ನಮಃ
44 ಓಂ ಭಕ್ತಾಗ್ರಹಕಾತರಾಯ ನಮಃ
45 ಓಂ ಶರಣಾಗತ ವತ್ಸಲಾಯ ನಮಃ





46 ಓಂ ಭಕ್ತಿಶಕ್ತಿಪ್ರದಾಯ ನಮಃ
47 ಓಂ ಜ್ಞಾನವೈರಾಗ್ಯದಾಯ ನಮಃ
48 ಓಂ ಪ್ರೇಮದಾಯ ನಮಃ
49 ಓಂ ಸಂಶಯ ಹೃದಯ ದೌರ್ಬಲ್ಯ
ಪಾಪಕರ್ಮವಾಸನಾ ಕ್ಷಯಕರಾಯ ನಮಃ
50 ಓಂ ಹೃದಯಗ್ರಂಥಿ ಭೇದಕಾಯ ನಮಃ
51 ಓಂ ಕರ್ಮಧ್ವಂಸಿನೇ ನಮಃ
52 ಓಂ ಶುದ್ಧ ಸತ್ವಸ್ಥಿತಾಯ ನಮಃ
53 ಓಂ ಗುಣಾತೀತಗುಣಾತ್ಮನೇ ನಮಃ
54 ಅನಂತಕಲ್ಯಾಣಗುಣಾಯ ನಮಃ
55 ಓಂ ಅಮೀತ ಪರಾಕ್ರಮಾಯ ನಮಃ
56 ಓಂ ಜಯಿನೇ ನಮಃ
57 ಓಂ ದುರ್ದಷಾಕ್ಷೋಭ್ಯಾಯ ನಮಃ
58 ಓಂ ಅಪರಾಜಿತಾಯ ನಮಃ
59 ಓಂ ತಿಲೋಕೇಷು ಅವಿಘಾತಗತಯೇ ನಮಃ
60 ಓಂ ಅಶಕ್ಯರಹಿತಾಯ ನಮಃ
61 ಓಂ ಸರ್ವ ಶಕ್ತಿಮೂರ್ತಯೇ ನಮಃ

62 ಓಂ ಸುರೂಪ ಸುಂದರಾಯ ನಮ:
63 ಓಂ ಸುಲೋಚನಾಯ ನಮ:
64 ಓಂ ಬಹುರೂಪ ವಿಶ್ವಮೂರ್ತಯೇ ನಮ:
65 ಓಂ ಅರೂಪಾವ್ಯಕ್ತಾಯ ನಮ:
66 ಓಂ ಅಚಿಂತ್ಯಾಯ ನಮ:
67 ಓಂ ಸೂಕ್ಷ್ಮಾಯ ನಮ:
68 ಓಂ ಸರ್ವಾಂತರ್ಯಾಮಿಣೇ ನಮ:
69 ಓಂ ಮನೋವಾಗತೀತಾಯ ನಮ:
70 ಓಂ ಪ್ರೇಮಮೂರ್ತಯೇ ನಮ:
71 ಓಂ ಸುಲಭದುರ್ಲಭಾಯ ನಮ:
72 ಓಂ ಅಸಹಾಯ ಸಹಾಯಾಯ ನಮ:
73 ಓಂ ಅನಾಥನಾಥದೀನ ಬಂಧವೇ ನಮ:
74 ಓಂ ಸರ್ವ ಭಾರಭೃತೇ ನಮ:
75 ಓಂ ಅಕರ್ಮಣೇಕರ್ಮಸುಕರ್ಮಣೇ ನಮ:
76 ಓಂ ಪುಣ್ಯಶ್ರವಣ ಕಿರ್ತನಾಯ ನಮ:
77 ಓಂ ತೀರ್ಥಾಯ ನಮ:
78 ಓಂ ವಾಸುದೇವಾಯ ನಮ:





79 ಓಂ ಸಾತಾಂಗತಯೇ ನಮ:
80 ಓಂ ಸತಪಾರಾಯಣಾಯ ನಮ:
81 ಓಂ ಲೋಕನಾಥಾಯ ನಮ:
82 ಓಂ ಪಾವನನಘಾಯ ನಮ:
83 ಓಂ ಅಮೃತಾಂಶವೇ ನಮ:
84 ಓಂ ಭಾಸ್ಕರ ಪ್ರಭಾಯ ನಮ:
85 ಓಂ ಬ್ರಹ್ಮಚರ್ಯತ್ ಪಶ್ಚರ್ಯಾದಿಸವ್ರತಾಯ ನಮ:
86 ಓಂ ಸತ್ಯಧರ್ಮಪರಾಯಣಾಯ ನಮ:
87 ಓಂ ಸಿದ್ಧೇಶ್ವರಾಯ ನಮ:
88 ಓಂ ಸಿದ್ಧಸಂಕಲ್ಪಾಯ ನಮ:
89 ಓಂ ಯೋಗೇಶ್ವರಾಯ ನಮ:
90 ಓಂ ಭಗವತೇ ನಮ:
91 ಓಂ ಭಕ್ತವತ್ಸಲಾಯ ನಮ:
92 ಓಂ ಸತ್ಪುರುಷಾಯ ನಮ:
93 ಓಂ ಪುರುಷೋತ್ತಮಾಯ ನಮ:
94 ಓಂ ಸತ್ಯತತ್ವಭೋಧಕಾಯ ನಮ:
95 ಓಂ ಕಾಮಿದಿಷಡ್ ವೈರಿಧ್ವಂಸಿನೇ ನಮ:

96 ಓಂ ಅಭೇದ ಆನಂದಾನುಭವ ಪ್ರದಾಯ ನಮ:
97 ಓಂ ಸಮ ಸರ್ವಮತ ಸಮ್ಮತಾಯ ನಮ:
98 ಓಂ ಶ್ರೀ ದಕ್ಷಿಣಾಮೂರ್ತಯೇ ನಮ:
99 ಓಂ ಶ್ರೀ ವೆಂಕಟೇಶರಮಣಾಯ ನಮ:
100 ಓಂ ಅದ್ಭುತಾನಂದ ಚರ್ಯಾಯ ನಮ:
101 ಓಂ ಪ್ರಸನ್ನಾರ್ತಿಹರಾಯ ನಮ:
102 ಓಂ ಸಂಸಾರ ಸರ್ವದು:ಖ ಕ್ಷಯಕರಾಯ ನಮ:
103 ಓಂ ಸರ್ವವಿತ್ಸರ್ವತೋಮುಖಾಯ ನಮ:
104 ಓಂ ಸರ್ವಾಂತರ್ಬಹಿ:ಸ್ಥಿತಾಯ ನಮ:
105 ಓಂ ಸರ್ವಮಂಗಲಕರಾಯ ನಮ:
106 ಓಂ ಸರ್ವಾಭೀಷ್ಟಪ್ರದಾಯ ನಮ:
107 ಓಂ ಸಮರಸ ಸನ್ಮಾರ್ಗ ಸ್ಥಾಪನಾಯ ನಮ:
108 ಓಂ ಶ್ರೀ ಸಮರ್ಥ ಸದ್ಗುರು

ಶ್ರೀ ಸಾಯಿನಾಥಾಯ ನಮ:

ಬಾಬಾರವರ ಹನ್ನೊಂದು ವಚನಗಳು.

1 ಶಿರಡಿಯ ಪವಿತ್ರ ಪಾವನಭೂಮಿಯಲ್ಲಿ ಯಾರು ಕಾಲಿಡುತ್ತಾರೋ ಅವರ ಎಲ್ಲ ಕಷ್ಟಗಳು ಮಾಯವಾಗುತ್ತವೆ.





2 ಯಾರು ನನ್ನ ಸಮಾಧಿಯ ಮೆಟ್ಟಲುಗಳನ್ನು ಸ್ಪರ್ಶ ಮಾಡುತ್ತಾರೋ ಅವರ ದು:ಖವೂ ನಾಶವಾಗುತ್ತದೆ.

3 ನಾನು ಈ ಮಾನವ ಶರೀರವನ್ನು ಬಿಟ್ಟು ಹೋದರೂ ಭಕ್ತರಿಗಾಗಿ ಭಕ್ತರ ಕರೆ ಕೇಳಿ ಓಡಿ ಬರುತ್ತೇನೆ.

4 ನನಗೆ ಹರಕೆ ಹೊತ್ತು ಯಾರು ದೃಢ ನಂಬಿಕೆ ನನ್ನಲ್ಲಿಡುತ್ತಾರೊ ಅಂತಹವರಿಗೆ ನನ್ನ ಸಮಾಧಿಯೂ ಕೂಡಾ ಕಾಪಾಡುತ್ತದೆ. ಇದರ ಬಗ್ಗೆ ಧೃಢ ನಂಬಿಕೆ ಇರಲಿ.

5 ನಾನು ನಿತ್ಯ ಜೀವಂತನು: ಇದು ಸತ್ಯವೂ ಹೌದು. ನೀವು ಇದರ ಸಾಕ್ಷಾತ್ ಅನುಭವವನ್ನು ಪಡೆಯಿರಿ.

6 ಯಾರಾದರೂ ನನಗೆ ಶರಣು ಬಂದು, ಅವರ ಜೀವನವು ಪ್ರಯೋಜನವಾಗದೇ ಇರುವವರಿದ್ದರೆ ತೋರಿಸಿ.

7 ಯಾರು ಹೇಗೆ ನನ್ನನ್ನು ಪ್ರಾರ್ಥಿಸುತ್ತಾರೊ; ಅಂತೆಯೇ ನಾನು ಅವರಿಗೆ ಫಲವನ್ನು ಕೊಡುತ್ತೇನೆ.

8 ನಿಮ್ಮೆಲ್ಲರ ಭಾರವನ್ನು ನಾನು ತೆಗೆದುಕೊಳ್ಳುತ್ತೇನೆ. ಇದರಲ್ಲಿ ಯಾವುದೇ ರೀತಿಯ ಅನುಮಾನವೇ ಬೇಡಾ.

9 ಎಲ್ಲ ಸಹಾಯವು ನಿಮಗೆ ಇಲ್ಲೇ ಸಿಗುತ್ತದೆ. ಇದನ್ನು ನೀವು ತಿಳಿಯಿರಿ. ಯಾರು ಯಾರು ಹೇಗೆ ಹೇಗೆ ಬೇಡುತ್ತಾರೊ ಹಾಗೆ ಫಲ ಸಿಗುತ್ತದೆ.

10 ಯಾರು ನನ್ನನ್ನು ಕಾಯಾ, ವಾಚಾ, ಮನಸಾ ಜಪಿಸುತ್ತಾರೋ ಅವರಿಗೆ ಸರ್ವ

ಕಾಲದಲ್ಲಿಯೂ ಋಣಿ.

11. ಸಾಯಿ ಸಾಯಿ ಎಂದವನೆ ಪುಣ್ಯವಂತನು, ಧನ್ಯನು ನನ್ನ ಮೇಲೆ ಅನನ್ಯ ವಿಶ್ವಾಸ ಶ್ರದ್ಧೆ ಇಟ್ಟು ಸಾಯಿ ಸಾಯಿ ಎಂದವನೇ ಧನ್ಯನು.

ಮರಾಠಿ ಲೇಖಕರು ಕನ್ನಡಕ್ಕೆ ಭಾಷಾಂತರ ಮಾಡಿದವರು ಶ್ರೀ ಹ.ಭ.ಪ ದಾಸಗಣೂ ಮಹಾರಾಜ ತ್ರಿಯಂಬಕ ಬಿ. ದೇಶಮುಖ

ಶಿರಡಿ.

ದೊರಕುವ ಸ್ಥಳ : ಶ್ರೀ ಸಾಯಿಬಾಬಾ ಸಂಸ್ಥಾನ ಶಿರ್ಡಿ
423 109 ತಾಲುಕು,
ರಾಹತಾ ಜಿ. ಅಹ್ಮದನಗರ (ಮಹಾರಾಷ್ಟ್ರ),
ಫೋನ ನಂ. 02423/55225/55226
Fax : 02423-55211
E-mail : saibaba@pn3.vsnl.net.in
Web-site : url:http://www.shrisaibaba.sansthan.org
ಶ್ರೀ ಸಾಯಿಬಾಬಾ ಸಂಸ್ಥಾನ ಶಿರ್ಡಿ





ಶ್ರೀ ಸಾಯಿನಿಕೇತನ
804, ಬಿ. ಡಾ. ಆಂಬೆಡಕರ್ ರೋಡ್,
ದಾದರ ಮುಂಬಯಿ 400014.
ಫೋನ್ ನಂ. 022/4166556
Fax : (022) 4150788
E-mail : saidadar@bom3.vsnl.net.in
ಓಂ ಸಾಯಿರಾಂ
ಹ.ಭ.ಪ. ಶ್ರೀ ದಾಸಗಣೂಮಹಾರಾಜ ವಿರಚಿತ
ಶ್ರೀ ಸಾಯಿನಾಥ ಸ್ತವನಮಂಜರಿ
ದ್ವಾರಕಾಮಾಯಿಯ ಕುಳಿತಿರುವ ಫೋಟೊ.
ಆವೃತ್ತಿ-1 (ಪ್ರಥಮಾವೃತ್ತಿ)
ಇಸವಿ-2000
ಪ್ರತಿ-25000
ಬೆಲೆ-ರೂ 2/-
ಎಲ್ಲ ಹಕ್ಕುಗಳನ್ನು ಸಂಸ್ಥಾನವು ಕಾದಿರಿಸಿದೆ.
ಪ್ರಕಾಶನ : ಶ್ರೀ ಸಾಯಿಬಾಬಾ ಸಂಸ್ಥಾನ ಶಿರ್ಡಿ.

ಶ್ರೀ ಸಾಯಿನಾಥ ಸ್ತವನಮಂಜರಿ ಮತ್ತು ಶ್ರೀ ಸಾಯಿಸುಮನಾಂಜಲಿ
ಮೂಲ ಮರಾಠಿ : ಶ್ರೀ ಹ. ಭ. ಪ. ದಾಸಗಣೂಮಹಾರಾಜ
ಕನ್ನಡಕ್ಕೆ ಅನುವಾದಿಸಿರುವವರು : ಶ್ರೀ ಟಿ.ಬಿ. ದೇಶಮುಖ ಶಿರ್ಡಿ
ಪ್ರಕಾಶಕರು : ಶ್ರೀ ದ. ಮ. ಸುಕಥನಕರ ಅಧ್ಯಕ್ಷ ವ್ಯವಸ್ಥಾಪನ ಮಂಡಳಿ,
ಶ್ರೀ ಸಾಯಿಬಾಬಾ ಸಂಸ್ಥಾನ ಶಿರ್ಡಿ,
ತಾಲೂಕು : ರಾಹತಾ ಜಿ. ಅಹ್ಮದನಗರ (ಮಹಾರಾಷ್ಟ್ರ)
ಪ್ರಥಮ ಸಂಸ್ಕರಣ ಇಸವಿ 2000
ಪ್ರತಿ 25,000

ಮುದ್ರಕರು : ಗೀತಾ ಆಫ್‌ಸೇಟ್ ಬಿ.23 ರಾಯಲ್ ಇಂಡಸ್ಟ್ರೀಯಲ್ ಎಸ್ಟೇಟ್,
ವಡಾಳಾ, ಮುಂಬಯಿ



## - ದೊರೆಯುವ ಸ್ಥಳ -

1) ಶ್ರೀ ಸಾಯಿಬಾಬಾ ಸಂಸ್ಥಾನ, ಶಿರಡಿ
ಅಹ್ಮದ್‌ನಗರ ಜಿಲ್ಲೆ (ಮಹಾರಾಷ್ಟ್ರ)

2) ಶ್ರೀ ಸಾಯಿಬಾಬಾ ಸಂಸ್ಥಾನ,
ಸಾಯಿ ನಿಕೇತನ
804 ಬಿ. ಡಾ. ಅಂಬೇಡ್ಕರ್ ರೋಡ್, ದಾದರ್, ಮುಂಬಯಿ 400 011.

Printed at Geeta Offset. Tel : 4124247, 4134984 Fax : 4168601